# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 05/02/2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು<br>ಶ್ರೀಯುತರುಗಳಾದ: | | ಹಾಜರಿದ್ದ ಅಧಿಕಾರಿಗಳು |
|---|---|---|
| ಪಿ. ಸುಗುಮಾರ್ | ಅಧ್ಯಕ್ಷರು | ಮುಖ್ಯ ಲೆಕ್ಕಾಧಿಕಾರಿಗಳು |
| ಕೆ.ಮಹೇಶ್‌ಬಾಬು | ಸದಸ್ಯರು | ಮುಖ್ಯ ಅಭಿಯಂತರರು (ಪೂರ್ವ) |
| ಮುನಿಸ್ವಾಮಿಗೌಡ | ಸದಸ್ಯರು | ಮುಖ್ಯ ಅಭಿಯಂತರರು (ರಾಜರಾಜೇಶ್ವರಿ ನಗರ) |
| ಬಿ.ಆರ್.ಚಂದ್ರಶೇಖರ್ | ಸದಸ್ಯರು | ಅಧೀಕ್ಷಕ ಅಭಿಯಂತರರು (ಪಶ್ಚಿಮ) |
| ಸೈಯದ್ ಹಸೀನಾ ತಾಜ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) |
| ಲೋಕೇಶ್ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| ಆರ್.ಉದಯ್‌ಕುಮಾರ್ | ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಯಶವಂತಪುರ) |
| ಎಂ. ಶ್ರೀನಿವಾಸ್ | ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಹಾಲಕ್ಷ್ಮಿಪುರ) |
| ಶ್ರೀವಿದ್ಯಾ ಎನ್. | ಸದಸ್ಯರು | ಕಲ್ಯಾಣಾಧಿಕಾರಿ (ರಾಜರಾಜೇಶ್ವರಿ ನಗರ) |
| | | ವ್ಯವಸ್ಥಾಪಕರು ಹಾಗೂ ಪ್ರಭಾರ ಕಲ್ಯಾಣಾಧಿಕಾರಿ (ಬೊಮ್ಮನಹಳ್ಳಿ)+ |
| | | ವ್ಯವಸ್ಥಾಪಕರು ಕಲ್ಯಾಣ ಇಲಾಖೆ (ಪಶ್ಚಿಮ) |
| | | ಕಮ್ಯೂನಿಟಿ ಅಫೇರ್ಸ್ ಅಧಿಕಾರಿ (ಮಹದೇವಪುರ) |
| | | ಕಮ್ಯೂನಿಟಿ ಅಫೇರ್ಸ್ ಅಧಿಕಾರಿ (ಯಲಹಂಕ) |

**ವಿಷಯದ ಸಂಖ್ಯೆ:– ಸಾನ್ಯಾಸ್ಥಾಸ/ 02/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(3)113/10–11, ದಿನಾಂಕ:29/11/2010 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ನಾಗರಾಜ್, ಮಾನ್ಯ ವಿರೋಧ ಪಕ್ಷದ ನಾಯಕರು ಮನವಿ ಸಲ್ಲಿಸಿ, ವಾರ್ಡ್ ನಂ. 43 ರಲ್ಲಿ ಶೇ. 22.75 ರ ಅನುದಾನದಡಿ ಸಾರ್ವಜನಿಕ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ರೂ.520 ಲಕ್ಷಗಳ ಮೊತ್ತದ ಅನುದಾನವನ್ನು ಕೋರಿರುತ್ತಾರೆ.

ಪ್ರಸ್ತಾವಿತ ವಾರ್ಡ್‌ಗೆ ಶೇ 22.75ರ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿ ಬಾಬ್ತಿನಡಿ ರೂ.125 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಸಲ್ಲಿಸಿರುವ ಬೇಡಿಕೆಗಳು ಲಭ್ಯವಿರುವ ಅನುದಾನಕ್ಕಿಂತ ರೂ. 395 ಲಕ್ಷಗಳು ಅಧಿಕವಾಗಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 43 ರ ಸಿವಿಲ್ ಕಾಮಗಾರಿಗಳಿಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೋರಿರುವ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:–*** ಮಾನ್ಯ ಆಯುಕ್ತರ ದಿನಾಂಕ:29/11/2010 ರ ಟಿಪ್ಪಣಿಯನ್ನು ಒಪ್ಪಿದೆ

**ವಿಷಯದ ಸಂಖ್ಯೆ:– ಸಾನ್ಯಾಸ್ಥಾಸ/ 03/2010–11**

ಆಯುಕ್ತರವರ ಟಿಪ್ಪಣಿ ದಿನಾಂಕ:29/11/2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ : 47 ರ ದೇವರಜೀವನಹಳ್ಳಿಯಲ್ಲಿ ಪರಿಶಿಷ್ಠ ಜಾತಿ/ಪಂಗಡ, ಅಲ್ಪ ಸಂಖ್ಯಾತರು ಮತ್ತು ಆರ್ಥಿಕವಾಗಿ ತೀರ ಹಿಂದುಳಿದ ಜನ ಸಾಮನ್ಯರು ಹೆಚ್ಚಿನ ಪ್ರಮಾಣದಲ್ಲಿ ವಾಸವಾಗಿರುತ್ತಾರೆ. ಸದರಿ ಪ್ರದೇಶವು ಬಹಳ ಹಿಂದುಳಿದ ಪ್ರದೇಶ ಹಾಗೂ ಹೆಚ್ಚು ಜನ ಸಾಂದ್ರತೆ ಹೊಂದಿದ್ದು, ಮೂಲಭೂತ ಸೌಕರ್ಯಗಳಿಗೆ ಕೊರತೆ ಇರುತ್ತದೆ. ಈ ಬಗ್ಗೆ ಶೇ. 22.75 ಅನುದಾನದ ಅಡಿಯಲ್ಲಿ ಸಮುದಾಯ ಭವನ ನಿರ್ಮಿಸುವುದು, ಶೌಚಾಲಯ ನಿರ್ಮಾಣ, ಪ್ರತ್ಯೇಕ ಮನೆ ನಿರ್ಮಾಣ, ರಸ್ತೆ ಬದಿ ಮೋರಿ ನಿರ್ಮಾಣ ಮತ್ತು ರಸ್ತೆ ಡಾಂಬರೀಕರಣ ಕೆಲಸಗಳನ್ನು ಕೈಗೊಳ್ಳಲು ವಾರ್ಡ್ ಪಾಲಿಕೆ ಸದಸ್ಯರು ಮನವಿ ಸಲ್ಲಿಸಿರುತ್ತಾರೆ. ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರು ಮೇಲೆ ತಿಳಿಸಿದ ಕೆಲಸಗಳಿಗೆ 38 ಅಂದಾಜು ಪಟ್ಟಿಗಳನ್ನು ಒಟ್ಟು ಮೊತ್ತ ರೂ. 600.00 ಲಕ್ಷಗಳಿಗೆ ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗಳ ವಿವರ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಪಟ್ಟಿ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | **Construction of Ambedkar Samudhaya Bhavan at Doddanna Nagar in D.J.Halli Ward No.47** | 80.00 |
| 2 | **Construction of Ambedkar Samudhaya Bhavan at Bangaragiri Lay out in D.J.Halli Ward No.47** | 30.00 |
| 3 | **Construction of Ambedkar Samudhaya Bhavan at Srinivasa Nagara in D.J.Halli Ward No.47** | 20.00 |
| 4 | **Construction of Toilet Block at Thangamalai Nagar in D.J.Halli Ward No.47** | 10.00 |
| 5 | **Construction of Individual Houses for SC/ST beneficiaries at Bangaragiri Lay out in D.J.Halli Ward No.47** | 9.50 |
| 6 | **Construction of Individual Houses for SC/ST beneficiaries at Kavalbyrasandra Grama Tana in D.J.Halli Ward No.47** | 9.50 |
| 7 | **Construction of Individual Houses for SC/ST beneficiaries at Kavalbyrasandra in D.J.Halli Ward No.47** | 9.50 |
| 8 | **Construction of Individual Houses for SC/ST beneficiaries at Srujan Nagar in D.J.Halli Ward No.47** | 9.50 |
| 9 | **Construction of Individual Houses for SC/ST beneficiaries at Srinivasa Nagar in D.J.Halli Ward No.47** | 9.50 |
| 10 | **Construction of Individual Houses for SC/ST beneficiaries at Sakkare Mandi in D.J.Halli Ward No.47** | 9.50 |
| 11 | **Construction of Individual Houses for SC/ST beneficiaries at Doddanna Nagar in D.J.Halli Ward No.47** | 9.50 |
| 12 | **Construction of Individual Houses for SC/ST beneficiaries at Thangamalai Nagar 'A' Block in D.J.Halli Ward No.47** | 9.50 |
| 13 | **Construction of Individual Houses for SC/ST beneficiaries at Kayeem Garden in D.J.Halli Ward No.47** | 9.50 |
| 14 | **Construction of Individual Houses for SC/ST beneficiaries at Thangamalai Nagar 'B' Block in D.J.Halli Ward No.47** | 9.50 |
| 15 | **Construction of Individual Houses for SC/ST beneficiaries at Amase Lane in D.J.Halli Ward No.47** | 9.50 |
| 16 | **Providing Mini water supply facilities to Muninagappa Block in D.J.Halli Ward NO.46** | 10.00 |

| | | |
|---|---|---|
| 17 | **Providing Mini water supply facilities to Amase lane in D.J.Halli Ward NO.47** | 10.00 |
| 18 | **Providing Mini water supply facilities to Doddanna Nagar 'E' Block in D.J.Halli Ward NO.47** | 10.00 |

. . . .3



| | | |
|---|---|---|
| 19 | **Providing Mini water supply facilities to Srinivasa Nagar 'E' Block in D.J.Halli Ward NO.47** | 10.00 |
| 20 | **Providing Mini water supply facilities to Kavalbyrasandra in D.J.Halli Ward NO.47** | 10.00 |
| 21 | **Providing Mini water supply facilities to Roshan Nagar in D.J.Halli Ward NO.47** | 10.00 |
| 22 | **Providing Mini water supply facilities to Bangaragiri Layout in D.J.Halli Ward NO.47** | 10.00 |
| 23 | **Providing Mini water supply facilities to Poojappa Garden in D.J.Halli Ward NO.47** | 10.00 |
| 24 | **Providing Mini water supply facilities to Panjappa lane in D.J.Halli Ward NO.47** | 10.00 |
| 25 | **Providing R.C.C drain & Asphalting to N.P. Factory road from Ch:00.00 to 155.00 Mtr in D.J.Halli Ward No.47** | 20.00 |
| 26 | **Providing R.C.C drain & Asphalting to N.P. Factory road from Ch:155.00 to 310.00 Mtr in D.J.Halli Ward No.47** | 20.00 |
| 27 | **Providing R.M.C & Drains to Cross roads and lanes of Srujan Nagar in D.J.Halli Ward No.47** | 10.00 |
| 28 | **Reconstruction of Drain and culvert at Srinivasa Nagar in D.J.Halli Ward No.47** | 15.00 |
| 29 | **Reconstruction of Drain and culvert at back side of Indira School in D.J.Halli Ward No.47** | 15.00 |
| 30 | **Providing RMC & Improvements to drain and footpath, culverts at Sakkare Mandi in D.J.Halli Ward No.47** | 20.00 |
| 31 | **Providing RMC & Improvements to drain and footpath, culverts at Zanda Galli in D.J.Halli Ward No.47** | 25.00 |
| 32 | **Providing Asphalting & Improvements to Drain at D.J.Halli Main road in Ward NO.47** | 25.00 |
| 33 | **Providing RMC & Improvements to drain and culverts at Kavalbyrasandra Grama Tana in D.J.Halli Ward No.47** | 20.00 |
| 34 | **Construction RCC drain and culverts at Indirapuram in D.J.Halli Ward No.47** | 15.00 |
| 35 | **Providing Improvements to drain & culvert to Anwar street to Indira Memorial school at D.J.Halli in Ward No.47** | 15.00 |
| 36 | **Providing Improvements to drain & culvert from Indira Memorial school to Doddanna Nagar Main road at D.J.Halli in Ward No.48** | 25.00 |
| 37 | **Providing RMC to cut portions of concrete road at Modi road at D.J.Halli in Ward No.47** | 10.50 |
| 38 | **Reconstruction of SSM Drain and providing covering slabs for Modi road from Bangaragiri Layout to 10th Cross of Modi mosque at D.J.Halli Ward NO.47** | 30.00 |

ಮೇಲ್ಕಂಡ 38 ವಿವಿಧ ಕಾಮಗಾರಿಗಳನ್ನು ಶೇ. 22.75 ರ ಹೆಚ್ಚುವರಿ ಅನುದಾನದ ಅಡಿಯಲ್ಲಿ ಕೈಗೊಳ್ಳಲು ಅನುಮೋದನೆ ಕೋರಿ ಸಲ್ಲಿಸಲಾದ ಟಿಪ್ಪಣಿ

***ನಿರ್ಣಯ:–*** ಮಾನ್ಯ ಆಯುಕ್ತರ ದಿನಾಂಕ:29/11/2010 ರ ಟಿಪ್ಪಣಿಯನ್ನು ಒಪ್ಪಿದೆ

**ವಿಷಯದ ಸಂಖ್ಯೆ:– ಸಾನ್ಯಾಸ್ಥಾಸ/ 04/2010–11**

ಆಯುಕ್ತರವರ ಟಿಪ್ಪಣಿ, ಸಂಖ್ಯೆ:ಅಆ(ಕ/ಆ)ಪಿಎಸ್ಆರ್(3)112/10–11, ದಿನಾಂಕ:29/11/2010ರಲ್ಲಿ ವಿವರಿಸಿರುವಂತೆ, ಶ್ರೀ. ಮುನಿರತ್ನ, ವಾರ್ಡ್ ನಂ. 37–ಯಶವಂತಪುರ ಪಾಲಿಕೆ ಸದಸ್ಯರು ಮನವಿ ಸಲ್ಲಿಸಿ, ಒಟ್ಟು 4 ಬ್ಲಾಕ್‌ಗಳ ಇ.ಡಬ್ಲ್ಯೂ.ಎಸ್. ವಸತಿ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಒಟ್ಟು ರೂ. 25.45 ಕೋಟಿ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

. . . .4



ಸದರಿ ಪ್ರಸ್ತಾವನೆಯನ್ನು ಶೀ. 22.75 ರಡಿ ಪರಿಗಣಿಸುವ ಕುರಿತು ಪರಿಶೀಲಿಸಲಾಗಿ, ಪ್ರಸ್ತಾವಿತ ವಾರ್ಡ್‌ಗೆ ಸಿವಿಲ್ ಕಾಮಗಾರಿ ಬಾಬ್ತಿನಡಿ, 71.45 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಈ ಅನುದಾನವನ್ನು ಉಪಯೋಗಿಸಿಕೊಳ್ಳುವ ಪ್ರಸ್ತಾವನೆ ಈಗಾಗಲೇ ಚಾಲ್ತಿಯಲ್ಲಿರುತ್ತದೆ. ಹಾಲಿ ಸಲ್ಲಿಸಿರುವ ಬೇಡಿಕೆಯು ಹೆಚ್ಚಿನ ಅನುದಾನದ ಬೇಡಿಕೆಯಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 37 ರ ಪಾಲಿಕೆ ಸದಸ್ಯರು ಕೋರಿರುವ ಅಧಿಕ ಮೊತ್ತದ ಅನುದಾನದ ಮಂಜೂರಾತಿ ಕುರಿತು ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:–*** ಮಾನ್ಯ ಆಯುಕ್ತರ ದಿನಾಂಕ:29/11/2010 ರ ಟಿಪ್ಪಣಿಯನ್ನು ಭಾಗಶ: ಒಪ್ಪುತ್ತಾ, 4 ಬ್ಲಾಕ್‌ಗಳ ಬದಲಾಗಿ, 2 ಬ್ಲಾಕ್‌ಗಳ ಇ.ಡಬ್ಲ್ಯೂ.ಎಸ್. ವಸತಿ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ರೂ.12.60 ಕೋಟಿ ಮಂಜೂರು ಮಾಡಲು ಒಪ್ಪಿದೆ.

**ವಿಷಯದ ಸಂಖ್ಯೆ:– ಸಾನ್ಯಾಸ್ಥಾಸ/ 05/2010–11**

ಆಯುಕ್ತರವರ ಟಿಪ್ಪಣಿ, ಸಂಖ್ಯೆ:, ಕ.ಅ./ಕೇಂ.ಕ./ಸಿ3/ಪಿಆರ್14/09–10 ದಿನಾಂಕ04/12/2010 ರಲ್ಲಿ ವಿವರಿಸಿರುವಂತೆ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನಸೌಧ, ಬೆಂಗಳೂರು–01 ಇವರು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಪತ್ರದ ಸಂಖ್ಯೆ: ಮುಮಕಾ/5756/2010 ದಿನಾಂಕ:16.09.2010 ರಲ್ಲಿ ಬರೆದಿರುತ್ತಾರೆ.

ಈ ಮೇಲ್ಕಂಡ ಪತ್ರದೊಂದಿಗೆ ಶ್ರೀ.ಎಂ.ಪಿ.ಕುಮಾರಸ್ವಾಮಿ, ಮಾನ್ಯ ಶಾಸಕರು, ಇವರು ಮಾನ್ಯ ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರವನ್ನು ಲಗತ್ತಿಸಿರುತ್ತಾರೆ. ಸದರಿ ಪತ್ರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಬದುಕಿನ ಅಪರೂಪದ ಚಿತ್ರಗಳನ್ನು ಒಳಗೊಂಡಿರುವ "ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಚಿತ್ರ ಸಂಪುಟ" ಎಂಬ ಪುಸ್ತಕದಲ್ಲಿ ಚಾರಿತ್ರಿಕ ಮಹತ್ವವುಳ್ಳ ಚಿತ್ರಗಳು ಹಾಗೂ ಮಾಹಿತಿಗಳು ಇದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಬಹಳ ಉಪಯುಕ್ತವಾಗಿದ್ದು, ಪುಸ್ತಕದ ಬೆಲೆ ರೂ.750/– ಆಗಿರುತ್ತದೆಂದು ತಿಳಿಸಿರುತ್ತಾರೆ.

ದಲಿತ ಜನರಲ್ಲಿ ಸ್ಪೂರ್ತಿ ತುಂಬಿ ಅವರನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವಂತೆ ಪ್ರೇರೆಪಿಸುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸ್ಲಂಗಳಲ್ಲಿರುವ ದಲಿತ ಸಂಘ ಸಂಸ್ಥೆಗಳಿಗೆ, ದಲಿತ ಮುಖಂಡರುಗಳಿಗೆ ಹಾಗೂ ಕಾಲೇಜಿನಲ್ಲಿ

ಓದುತ್ತಿರುವ ದಲಿತ ವಿದ್ಯಾರ್ಥಿಗಳಿಗೆ ವಿತರಿಸಲು ಪ್ರತಿ ವಾರ್ಡ್‌ಗೆ ಒಟ್ಟು 10 ಪುಸ್ತಕದಂತೆ ಎಲ್ಲಾ ವಾರ್ಡ್‌ಗಳಿಗೆ ಒಟ್ಟು 2000 ಪ್ರತಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶೇ.20ರ ಹಣದಿಂದ ಖರೀದಿಸಿ, ವಿತರಿಸಬೇಕೆಂದು ಕೋರಿರುತ್ತಾರೆ.

ಸದರಿ ಕೋರಿಕೆಯ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮಾನ್ಯ ಆಯುಕ್ತರವರನ್ನು ಕೋರಲು ಮಾನ್ಯ ಮುಖ್ಯಮಂತ್ರಿಯವರಿಂದ ನಿರ್ದೇಶಿತನಾಗಿರುತ್ತಾರೆ ಎಂದು ಅವರ ಪತ್ರದಲ್ಲಿ ತಿಳಿಸಿರುತ್ತಾರೆ.

. . . .5



ಶ್ರೀ.ಎಂ.ಪಿ.ಕುಮಾರಸ್ವಾಮಿ, ಶಾಸಕರು, ಮೂಡಿಗೆರೆ ವಿಧಾನ ಸಭಾಕ್ಷೇತ್ರ ಹಾಗೂ ಅಧ್ಯಕ್ಷರು, ಪರಿಶಿಷ್ಟಜಾತಿ/ಪಂಗಡ ಕಲ್ಯಾಣ ಸಮಿತಿ ಇವರು ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ:16.09.2010 ರಂದು ಪತ್ರ ಬರೆದು ಈ ಮೇಲಿನಂತೆ ವಿವರಿಸಿ ಪಾಲಿಕೆಯ ಮಾನ್ಯ ಆಯುಕ್ತರವರಿಗೆ ಸೂಚನೆ ನೀಡಬೇಕೆಂದು ಕೋರಿರುತ್ತಾರೆ.

ಶ್ರೀ.ಎಂ.ಶ್ರೀನಿವಾಸ್, ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ಹಾಗೂ ಶ್ರೀ.ಎಸ್.ವೆಂಕಟೇಶ್ ಬಾಬು, ನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ:73– ಕೊಟ್ಟಿಗೆ ಪಾಳ್ಯ, ಇವರುಗಳು ಸಹ ಕ್ರಮವಾಗಿ ದಿನಾಂಕ:04.10.2010 ಹಾಗೂ 14.10.2010 ರಲ್ಲಿ ಈ ಮೇಲಿನಂತೆಯೇ ತಿಳಿಸುತ್ತಾ ಪ್ರತಿ ವಾರ್ಡ್‌ಗೆ 20 ಪುಸ್ತಕಗಳಂತೆ ಎಲ್ಲಾ ವಾರ್ಡ್‌ಗಳಿಗೆ ಸದರಿ ಪುಸ್ತಕವನ್ನು ಖರೀದಿಸುವಂತೆ ಮಾನ್ಯ ಆಯುಕ್ತರವರಿಗೆ ಕೋರಿಕೊಂಡಿರುತ್ತಾರೆ.

ಸದರಿ ಪುಸ್ತಕವನ್ನು ಶ್ರೀ.ಅನಂತರಾಯಪ್ಪರವರ ಸಂಪಾದಕೀಯದಲ್ಲಿ ಅಶೋಕ ಪಬ್ಲಿಕೇಷನ್ಸ್, ಸಂಖ್ಯೆ:712, 2ನೇ ಮುಖ್ಯರಸ್ತೆ, 11ನೇ ಬ್ಲಾಕ್ (ಬಿಡಿಎ ಲೇಔಟ್) ನಾಗರಬಾವಿ 2ನೇ ಹಂತ, ಬೆಂಗಳೂರು–72 ಇವರ ಪ್ರಕಾಶನದಿಂದ ಹೊರತಂದಿರುತ್ತಾರೆ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ವಿಭಾಗದಲ್ಲಿ 2010–11ನೇ ಸಾಲಿನ ಆಯವ್ಯಯದಲ್ಲಿ ಈ ಮೇಲ್ಕಂಡಂತೆ ತಿಳಿಸಿರುವ ಡಾ.ಬಿ.ಆರ್.ಅಂಬೇಡ್ಕರ್‌ರವರ ಬದುಕಿನ ಪುಸ್ತಕವನ್ನು ಖರೀದಿಸಲು ಯಾವುದೇ ಅನುದಾನವನ್ನು ಕಾಯ್ದಿರಿಸಿರುವುದಿಲ್ಲ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಡುವ ಶೇ.22.75 ರ ಅನುದಾನದಲ್ಲಿಯೂ ಸಹ ಯಾವುದೇ ಕಾರ್ಯಕ್ರಮ ಇರುವುದಿಲ್ಲ.**

ಸದರಿ ವಿಷಯವು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಆದಕಾರಣ, ಕಲ್ಯಾಣ ವಿಭಾಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ ಬದುಕಿನ ಪುಸ್ತಕವನ್ನು ಖರೀದಿಸಲು ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೇ ಇರುವುದರಿಂದ ಹಾಗೂ ಅವಕಾಶವಿಲ್ಲದೇ ಇರುವುದರಿಂದ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ, ಶ್ರೀ.ಎಂ.ಪಿ.ಕುಮಾರಸ್ವಾಮಿ, ಶಾಸಕರು, ಮೂಡಿಗೆರೆ ವಿಧಾನ ಸಭಾಕ್ಷೇತ್ರ, ಶ್ರೀ.ಎಂ.ಶ್ರೀನಿವಾಸ್, ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ಹಾಗೂ ಶ್ರೀ.ಎಸ್.ವೆಂಕಟೇಶ್ ಬಾಬು, ನಗರ

ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ: 73– ಕೊಟ್ಟಿಗೆ ಪಾಳ್ಯ, ಇವರುಗಳ ಕೋರಿಕೆಯ ಮೇರೆಗೆ ಮೇಲ್ಕಂಡ ಪುಸ್ತಕವನ್ನು ಶೇ.22.75% ರ ಅನುದಾನದಲ್ಲಿ ಖರೀದಿಸುವ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಿದೆ.

***ನಿರ್ಣಯ:–*** ಆಯುಕ್ತರ ಟಿಪ್ಪಣಿ ದಿನಾಂಕ:04/12/2010 ರ ಅಂಶಗಳನ್ನು ಗಮನಿಸಲಾಗಿದೆ. ಶೇ.22.75% ರ ಅನುದಾನದಡಿಯಲ್ಲಿ, ಡಾ|| ಬಿ.ಆರ್.ಅಂಬೇಡ್ಕರ್‌ರವರ ಚಿತ್ರ ಸಂಪುಟ ಪುಸ್ತಕವನ್ನು ಖರೀದಿಸಲು ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುವುದಿಲ್ಲವೆಂದು ತಿಳಿಸಲಾಗಿರುತ್ತದೆ.

ಸದರಿ ಪುಸ್ತಕವು ಡಾ|| ಬಿ.ಆರ್.ಅಂಬೇಡ್ಕರ್ ರವರ ಚಿತ್ರ ಸಂಪುಟ, ಅಪರೂಪದ ಚಿತ್ರಗಳನ್ನು ಒಳಗೊಂಡಿದ್ದು, ವಿದ್ಯಾರ್ಥಿಗಳಿಗೆ ಉಪಯೋಗವಾಗುವುದರಿಂದ, 1000 ಪುಸ್ತಕಗಳನ್ನು ಕಲ್ಯಾಣ

. . . .6



ಕಾರ್ಯಕ್ರಮಗಳ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದವರಿಗೆ ಹಮ್ಮಿಕೊಂಡಿರುವ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು – **"ಈಗಾಗಾಲೇ ರೂಪಿಸಿರುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಯಾವುದಾದರೂ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು"** –ಶೀರ್ಷಿಕೆಯಡಿಯಲ್ಲಿ ಖರೀದಿಸಿ, ವೆಚ್ಚವನ್ನು ಭರಿಸತಕ್ಕದೆಂದು ತೀರ್ಮಾನಿಸಲಾಯಿತು.

**ವಿಷಯದ ಸಂಖ್ಯೆ:– ಸಾನ್ಯಾಸ್ಥಾಸ/ 06/2010–11**

ಆಯುಕ್ತರವರ ಟಿಪ್ಪಣಿ, ಸಂಖ್ಯೆ:, ಅಆ(ಕ)ಪಿಎಸಾರ್(3)116/10–11 ದಿನಾಂಕ20/12/2010 ರಲ್ಲಿ ವಿವರಿಸಿರುವಂತೆ ಶ್ರೀ.ಎನ್. ಚಂದ್ರ, ಮಾನ್ಯ ನಗರ ಪಾಲಿಕೆ ಸದಸ್ಯರು(ವಾರ್ಡ್ ನಂ.62,ರಾಮಸ್ವಾಮಿ ಪಾಳ್ಯ) ಮನವಿ ಸಲ್ಲಿಸಿ,ವಾರ್ಡ್‌ನಂ.62ರಲ್ಲಿ ಶೇ. 22.75 ರ ಅನುದಾನದಡಿ ಸಾರ್ವಜನಿಕ ಸಿವಿಲ್ ಮತ್ತು ಗಂಗಾಭವಾನಿ ನಗರದಲ್ಲಿನ 324 ಮನೆಗಳ ಮೇಲ್ಛಾವಣಿ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.193.95 ಲಕ್ಷಗಳ ಮೊತ್ತದ ಅನುದಾನವನ್ನು ಕೋರಿರುತ್ತಾರೆ.

ಪ್ರಸ್ತಾವಿತ ವಾರ್ಡ್‌ಗೆ ಶೇ 22.75ರ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿ ಮತ್ತು ಮನೆಗಳ ಮೇಲ್ಛಾವಣಿ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲುವ ಬಾಬ್ತಿನಡಿ ರೂ.23.40 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಸಲ್ಲಿಸಿರುವ ಬೇಡಿಕೆಗಳು ಲಭ್ಯವಿರುವ ಅನುದಾನಕ್ಕಿಂತ ರೂ.170.55 ಲಕ್ಷಗಳು ಅಧಿಕವಾಗಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 62ರ ಸಿವಿಲ್ ಕಾಮಗಾರಿಗಳಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:–*** ಮಾನ್ಯ ಆಯುಕ್ತರ ದಿನಾಂಕ:20/12/2010 ರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ:– ಸಾನ್ಯಾಸ್ಥಾಸ/ 07/2010–11**

ಆಯುಕ್ತರವರ ಟಿಪ್ಪಣಿ, ಸಂಖ್ಯೆ:, ಅಆ(ಕ)ಪಿಎಸಾರ್(3)117/10-11 ದಿನಾಂಕ24/12/2010 ರಲ್ಲಿ ವಿವರಿಸಿರುವಂತೆ ಶ್ರೀ ಲೋಕೇಶ್(ನಾಯಕ), ಮಾನ್ಯ ನಗರ ಪಾಲಿಕೆ ಸದಸ್ಯರು(ವಾರ್ಡ್ ನಂ.116,ನೀಲಸಂದ್ರ) ಮನವಿ ಸಲ್ಲಿಸಿ,ವಾರ್ಡ್‌ನಂ.116ರಲ್ಲಿ ಶೇ. 22.75 ರ ಅನುದಾನದಡಿ ಲಕ್ಷ್ಮಣ್‌ರಾವ್ ನಗರ ಮತ್ತು ಅಂಬೆಡ್ಕರ್ ನಗರದಲ್ಲಿ ವಾಸಿಸುತ್ತಿರುವ ಪರಿಶಿಷ್ಠ ಜಾತಿ/ಪಂಗಡದವರಿಗೆ 126 ಮನೆಗಳು ಮತ್ತು ಸಾರ್ವಜನಿಕ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ರೂ.595.00 ಲಕ್ಷಗಳ ಮೊತ್ತದ ಅನುದಾನವನ್ನು ಕೋರಿರುತ್ತಾರೆ.

ಪ್ರಸ್ತಾವಿತ ವಾರ್ಡ್‌ಗೆ ಶೇ 22.75ರ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿ ಮತ್ತು ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲುವ ಬಾಬ್ತಿನಡಿ ರೂ.45 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಈ ಅನುದಾನವನ್ನು ಉಪಯೋಗಿಸಿಕೊಳ್ಳುವ ಪ್ರಸ್ತಾವನೆ ಈಗಾಗಲೇ ಚಾಲ್ತಿಯಲ್ಲಿರುತ್ತದೆ. ಹಾಲಿ ಸಲ್ಲಿಸಿರುವ ಬೇಡಿಕೆಯು ಹೆಚ್ಚಿನ ಅನುದಾನದ ಬೇಡಿಕೆಯಾಗಿರುತ್ತದೆ

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ.116ರ ಮನೆಗಳು ಮತ್ತು ಸಾರ್ವಜನಿಕ ಸಿವಿಲ್ ಕಾಮಗಾರಿಗಳಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ಅಧಿಕ ಮೊತ್ತದ

. . . .7



ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:-*** ಮಾನ್ಯ ಆಯುಕ್ತರ ದಿನಾಂಕ:24/12/2010 ರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ:- ಸಾನ್ಯಾಸ್ಥಾಸ/ 08/2010-11**

ಆಯುಕ್ತರವರ ಟಿಪ್ಪಣಿ, ಸಂಖ್ಯೆ:, ಅಆ(ಕ)ಪಿಎಸಾರ್(3)118/10-11 ದಿನಾಂಕ27/12/2010 ರಲ್ಲಿ ವಿವರಿಸಿರುವಂತೆ ಶ್ರೀಮತಿ ಕೆ. ಪೂರ್ಣಿಮಾ, ಮಾನ್ಯ ನಗರ ಪಾಲಿಕೆ ಸದಸ್ಯರು(ವಾರ್ಡ್ ನಂ.53,ಬಸವನಪುರ) ಮನವಿ ಸಲ್ಲಿಸಿ, ವಾರ್ಡ್‌ನಂ.53ರಲ್ಲಿ ಶೇ. 22.75 ರ ಅನುದಾನದಡಿ 1) ಚಿಕ್ಕ ದೇವಸಂದ್ರ 2)ಚಿಕ್ಕಬಸವನಪುರ 3)ಸ್ವತಂತ್ರನಗರ 4)ಪ್ರಿಯಾಂಕನಗರ 5)ಸೀಗೆಹಳ್ಳಿ 6)ಜ್ಯೋತಿನಗರ ಮತ್ತು 7)ಮೇಡಹಳ್ಳಿ ಪ್ರದೇಶದಲ್ಲಿ ವಾಸಿಸುತ್ತಿರುವ ಪರಿಶಿಷ್ಠ ಜಾತಿ/ಪಂಗಡದವರಿಗೆ 111 ಉಚಿತ ಮನೆಗಳನ್ನು ನಿರ್ಮಿಸಲು ಮತ್ತು ಮಾನ್ಯ ಶಾಸಕರಾದ ಶ್ರೀ ನಂದೀಶ್ ರೆಡ್ಡಿ ರವರು 10 ಮನೆಗಳನ್ನು ನಿರ್ಮಿಸಿಕೊಡಲು ಕೋರಿರುತ್ತಾರೆ. ಒಟ್ಟು 121 ಮನೆಗಳನ್ನು ನಿರ್ಮಿಸಲು ಕೋರಿದ್ದು, ಇದು ರೂ.363.00 ಲಕ್ಷಗಳ ಹೆಚ್ಚುವರಿ ಅನುದಾನದ ಕೋರಿಕೆಯಾಗಿರುತ್ತದೆ. ಕೋರಿರುತ್ತಾರೆ.

ಪ್ರಸ್ತಾವಿತ ವಾರ್ಡ್‌ಗೆ ಶೇ 22.75ರ ಅನುದಾನದಡಿ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲುವ ಲಭ್ಯವಿರುವ ಅನುದಾನವನ್ನು ಹೊರತುಪಡಿಸಿ ಹಾಲಿ ಸಲ್ಲಿಸಿರುವ ಬೇಡಿಕೆಯು ಹೆಚ್ಚಿನ ಅನುದಾನದ ಬೇಡಿಕೆಯಾಗಿರುತ್ತದೆ

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ.53ರ ಮನೆಗಳ ನಿರ್ಮಾಣ ಕಾಮಗಾರಿಗಳಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಮತ್ತು ಮಾನ್ಯ ಶಾಸಕರು ಕೋರಿರುವ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:-*** ಮಾನ್ಯ ಆಯುಕ್ತರ ದಿನಾಂಕ:27/12/2010 ರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ:– ಸಾನ್ಯಾಸ್ಥಾಸ/ 09/2010–11**

ಆಯುಕ್ತರ ಟಿಪ್ಪಣಿ ಸಂಖ್ಯೆ.ಅಆ(ಕ/ಆ)ಪಿಎಸ್‌ಆರ್(3)19/10–11 ದಿನಾಂಕ:27/12/2010 ರಲ್ಲಿ ವಿವರಿಸಿರುವಂತೆ, ಶ್ರೀ ಕೆ. ಎಲ್. ತಿಮ್ಮನಂಜಯ್ಯ (ಡಿ.ಸಿ.ಇ), ಮಾನ್ಯ ನಗರ ಪಾಲಿಕೆ ಸದಸ್ಯರು (ವಾರ್ಡ್ ನಂ. 41, ಪೀಣ್ಯಾ ಕೈಗಾರಿಕಾ ಪ್ರದೇಶ) ಉಲ್ಲೇಖಿತ ಕಡತಗಳಲ್ಲಿ ಲಗತ್ತಾಗಿರುವ 2 ಪ್ರತ್ಯೇಕ ಮನವಿಗಳನ್ನು ಸಲ್ಲಿಸಿ, ವಾರ್ಡ್ ನಂ. 41 ರಡಿಯಲ್ಲಿ ಬರುವ ಹರಿಜನ ಮತ್ತು ಗಿರಿಜನ ಕಾಲೋನಿಯಲ್ಲಿ ಶೇ. 22.75 ರ ಅನುದಾನದಡಿ ಒಟ್ಟು 20 ವಿವಿಧ ಸಾರ್ವಜನಿಕ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ರೂ. 199.39 ಲಕ್ಷಗಳ ಮೊತ್ತದ ಅನುದಾನವನ್ನು ಕೋರಿರುತ್ತಾರೆ.

ಪ್ರಸ್ತಾವಿತ ವಾರ್ಡ್‌ಗೆ ಶೇ 22.75ರ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿ ಬಾಬ್ತಿನಡಿ ರೂ. 50 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಸಲ್ಲಿಸಿರುವ ಬೇಡಿಕೆಗಳು ಲಭ್ಯವಿರುವ ಅನುದಾನಕ್ಕಿಂತ ರೂ. 149.39 ಲಕ್ಷಗಳು ಅಧಿಕವಾಗಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 41 ರ

. . . .8



ಸಾರ್ವಜನಿಕ ಸಿವಿಲ್ ಕಾಮಗಾರಿಗಳಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ರೂ. 149.39 ಲಕ್ಷಗಳ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:–*** ಮಾನ್ಯ ಆಯುಕ್ತರ ದಿನಾಂಕ:27/12/2010 ರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ: ಸಾನ್ಯಾಸ್ಥಾಸ/ 11/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ)ಪಿಎಸ್‌ಆರ್(3)123/10–11 ದಿನಾಂಕ:6/1/11ರಲ್ಲಿ ವಿವರಿಸಿರುವಂತೆ, ಶ್ರೀ ಆರ್. ಎಸ್. ಸತ್ಯ ನಾರಾಯಣ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಾನ್ಯ ನಗರ ಪಾಲಿಕೆ ಸದಸ್ಯರು (ವಾರ್ಡ್ ನಂ.77, ದತ್ತಾತ್ರೇಯ ದೇವಸ್ಥಾನ) ಮನವಿ ಸಲ್ಲಿಸಿ, ವಾರ್ಡ್ ನಂ.77 ರಲ್ಲಿ ಶೇ. 22.75 ರ ಅನುದಾನದಡಿ ದತ್ತಾತ್ರೇಯ ದೇವಸ್ಥಾನ ಪ್ರದೇಶದಲ್ಲಿ ವಾಸಿಸುತ್ತಿರುವ 150 ಪರಿಶಿಷ್ಠ ಜಾತಿ/ಪಂಗಡದ ವಸತಿ ರಹಿತ ಫಲಾನುಭವಿಗಳ ಪಟ್ಟಿಯನ್ನು ನೀಡಿ ಸದರಿ ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಿಸಲು ದಿನಾಂಕ 09–12–2010 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯನ್ನು ಉಲ್ಲೇಖಿಸಿ ಅನುದಾನವನ್ನು ಬಿಡುಗಡೆ ಮಾಡಲು ಹಾಗೂ ಈ ಕೊಳಚೆ ಪ್ರದೇಶದ ನಿವಾಸಿಗಳಿಗೆ ಸಮುದಾಯ ಭವನ ಮತ್ತು ವಾಚನಾಲಯವನ್ನು ನಿರ್ಮಿಸಲು ರೂ. 40.00 ಲಕ್ಷಗಳ ಪ್ರತ್ಯೇಕ ಅನುದಾನದವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪ್ರಸ್ತಾವಿತ ವಾರ್ಡ್‌ಗೆ ಶೇ 22.75ರ ಅನುದಾನದಡಿ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲುವ ಲಭ್ಯವಿರುವ ಅನುದಾನವನ್ನು ಹೊರತುಪಡಿಸಿ ಹಾಲಿ ಸಲ್ಲಿಸಿರುವ ಬೇಡಿಕೆಯು ಹೆಚ್ಚಿನ ಅನುದಾನದ ಬೇಡಿಕೆಯಾಗಿರುತ್ತದೆ

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ.77 ರಲ್ಲಿ 150 ಮನೆಗಳ ನಿರ್ಮಾಣ ಕಾಮಗಾರಿಗೆ ಅನುದಾನ ಮತ್ತು ಸಮುದಾಯ ಭವನ ಹಾಗೂ ವಾಚನಾಲಯ ನಿರ್ಮಾಣಕ್ಕೆ ಪ್ರತ್ಯೇಕ ರೂ. 40.00

ಲಕ್ಷಗಳ ಅನುದಾನದ ಪ್ರಸ್ತಾವನೆಯಾಗಿದ್ದು, ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:-*** ಮಾನ್ಯ ಆಯುಕ್ತರ ದಿನಾಂಕ:06/01/2011 ರ ಟಿಪ್ಪಣಿಯಲ್ಲಿರುವ ಅಂಶಗಳನ್ನು ಗಮನಿಸಲಾಗಿದೆ. 150 ಮನೆಗಳ ನಿರ್ಮಾಣ ಕಾಮಗಾರಿಗೆ ಅನುದಾನ ಮತ್ತು ಸಮುದಾಯ ಭವನ ಹಾಗೂ ವಾಚನಾಲಯದ ನಿರ್ಮಾಣಕ್ಕೆ ರೂ.40.00 ಲಕ್ಷಗಳೊಂದಿಗೆ (ಒಟ್ಟು ರೂ.490.00 ಲಕ್ಷಗಳು) ಅನುದಾನವನ್ನು ಮಂಜೂರು ಮಾಡಲು ಒಪ್ಪಿದೆ.

**ವಿಷಯದ ಸಂಖ್ಯೆ: ಸಾನ್ಯಾಸ್ಥಾಸ/ 13/2010-11**

ಆಯುಕ್ತರು ರವರ ಕಛೇರಿ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸಾರ್(3)122/10-11, ದಿನಾಂಕ:07/01/2011ರಲ್ಲಿ ವಿವರಿಸಿರುವಂತೆ, ಶ್ರೀ ಎನ್. ಚಂದ್ರಶೇಖರ್ ರಾಜು ಮಾನ್ಯ ನಗರ ಪಾಲಿಕೆ ಸದಸ್ಯರು (ವಾರ್ಡ್ ನಂ.177, ಜೆ.ಪಿ. ನಗರ) ಮನವಿ ಸಲ್ಲಿಸಿ, ಜಯನಗರ ವಿಧಾನ ಸಭಾ ಕ್ಷೇತ್ರ, ಜೆ.ಪಿ.ನಗರ, ವಾರ್ಡ್‌ನಂ.177ರಲ್ಲಿ, 150 ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲು (JOB ORIENTED COURSE) ಕಟ್ಟಡವನ್ನು ನಿರ್ಮಿಸಿ ತರಬೇತಿ ಕೇಂದ್ರವನ್ನು ತೆರೆಯಲು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ನಮಿತಿಯ

. . . .9



ಅಧ್ಯಕ್ಷರು. 2010-11ರ ಸಾಲಿನ ಆಯವ್ಯಯದ ಭಾಷಣದ ಪುಸ್ತಕದಲ್ಲಿ ಓದಿ ದಾಖಲಿಸಿರುವುದು ಸರಿಯಷ್ಟೆ; ಈ ಒಂದು ಕಟ್ಟಡ ನಿರ್ಮಾಣಕ್ಕೆ ಜೆ.ಸಿ. ನಗರ ವಾರ್ಡ್-177, ಕೆ.ಎಸ್.ಆರ್.ಟಿ.ಸಿ. ಕೊಳಚೆ ಪ್ರದೇಶದಲ್ಲಿ ಸುಮಾರು 6000ಚ.ಅಡಿಗಳ ಪಾಲಿಕೆಯ ಜಾಗವನ್ನು ಸಹ ಕಾದಿರಿಸಲಾತರುತ್ತದೆಂದು, ಈ ಪ್ರದೇಶದಲ್ಲಿ ಹೆಚ್ಚಾಗಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗದವರು ವಾಸವಾಗಿರುವುದರಿಂದ, ಸದರಿ ಜನಾಂಗದವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಕಟ್ಟಡ ನಿರ್ಮಾಣಕ್ಕೆ ಶೇ.22.75ರ ಅನುದಾನದಲ್ಲಿ ಕಾದಿರಿಸಿ ಅನುದಾನ ಬಿಡುಗಡೆ ಮಾಡುವ ಮೂಲಕ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಪರ ಆಯುಕ್ತರು(ದಕ್ಷಿಣ)ರವರು ರೂ.270.00ಲಕ್ಷಗಳ ಅಂದಾಜು ಪ್ರಸ್ತಾವನೆ ಯನ್ನು ಸಲ್ಲಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಜಯನಗರ ವಿಧಾನ ಸಭಾ ಕ್ಷೇತ್ರ, ಜೆ.ಪಿ.ನಗರ, ವಾರ್ಡ್‌ನಂ.177ರಲ್ಲಿ, 150 ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲು (JOB ORIENTED COURSE) ಕಟ್ಟಡವನ್ನು ನಿರ್ಮಿಸಿ ತರಬೇತಿ ಕೇಂದ್ರವನ್ನು ತೆರೆಯಲು ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ರೂ. 270.00ಲಕ್ಷಗಳ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:-*** ಮಾನ್ಯ ಆಯುಕ್ತರ ದಿನಾಂಕ:07/01/2011 ರ ಟಿಪ್ಪಣಿಯನ್ನು. ಒಪ್ಪಿದೆ.

**ವಿಷಯದ ಸಂಖ್ಯೆ: ಸಾನ್ಯಾಸ್ಥಾಸ/ 15/2010-11**

ಆಯುಕ್ತರು ರವರ ಕಛೇರಿ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸಾರ್(3)125/10-11, ದಿನಾಂಕ:18/01/2011ರಲ್ಲಿ ವಿವರಿಸಿರುವಂತೆ, ಶ್ರೀ ಎನ್. ಚಂದ್ರ, ಸದಸ್ಯರು. ವಾರ್ಡ್ ನಂ.62 (ರಾಮಸ್ವಾಮಿ ಪಾಳ್ಯ) ಮನವಿ ಸಲ್ಲಿಸಿ, ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ವಾಸವಾಗಿರುವುದರಿಂದ ಶೇ 22.75 ರ ಯೋಜನೆಯಡಿಯಲ್ಲಿ ಒಟ್ಟು 561 ಮನೆಗಳನ್ನು ನಿರ್ಮಿಸಲು ಕೋರಿರುವ ಹಿನ್ನಲೆಯಲ್ಲಿ, ಪ್ರಸ್ತಾವಿತ ವಾರ್ಡ್‌ಗೆ ಹಂಚಿಕೆಯಾಗಿರುವ 252.40 ಲಕ್ಷಗಳನ್ನು ಹೊರತುಪಡಿಸಿ 561 ಮನೆಗಳನ್ನು

ನಿರ್ಮಿಸುವ ಒಟ್ಟು 187 ಕಾಮಗಾರಿಗಳಿಗೆ ರೂ. 1683.00 ಲಕ್ಷಗಳ ಹೆಚ್ಚಿನ ಮೊತ್ತದ ಅನುದಾನ ಬೇಡಿಕೆಯ ಪ್ರಸ್ತಾವನೆ ಜಂಟಿ ಆಯುಕ್ತರು (ಪೂರ್ವ) ವಲಯ ದಿಂದ ಬಂದಿರುತ್ತದೆ.

ಅದರಂತೆ ಪರಿಶೀಲಿಸಲಾಗಿ ಪ್ರಸ್ತಾವಿತ ವಾರ್ಡ್‌ನಲ್ಲಿ ಶೇ. 22.75 ರ ಅನುದಾನದಡಿ ಸಾರ್ವಜನಿಕ ಸಿವಿಲ್ ಮತ್ತು ಗಂಗಾಭವಾನಿ ನಗರದಲ್ಲಿನ 324 ಮನೆಗಳ ಮೇಲ್ಛಾವಣಿ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ರೂ. 193.95 ಲಕ್ಷಗಳ ಮೊತ್ತದ ಅನುದಾನವನ್ನು ಕೋರಿದ್ದರ ಮೇರೆಗೆ, ಸಿವಿಲ್ ಕಾಮಗಾರಿ ಮತ್ತು ಮನೆಗಳ ಮೇಲ್ಛಾವಣಿ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುವ ಬಾಬ್ತಿನಡಿ ಲಭ್ಯವಿದ್ದ ರೂ. 23.40 ಲಕ್ಷಗಳ ಅನುದಾನವನ್ನು ಹೊರತುಪಡಿಸಿ ರೂ.170.55 ಅಧಿಕ ಮೊತ್ತದ ಮಂಜೂರಾತಿಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 62ರ ಒಟ್ಟು 561 ಮನೆಗಳನ್ನು ನಿರ್ಮಿಸಲು ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ರೂ. 1683 ಲಕ್ಷಗಳ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ:–</u>*** ಮಾನ್ಯ ಆಯುಕ್ತರ ದಿನಾಂಕ:18/01/2011 ರ ಟಿಪ್ಪಣಿಯನ್ನು ಒಪ್ಪಿದೆ.

. . . .10



**<u>ವಿಷಯದ ಸಂಖ್ಯೆ: ಸಾನ್ಯಾಸ್ಥಾಸ/ 16/2010–11</u>**

ಆಯುಕ್ತರು ರವರ ಕಛೇರಿ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸಾರ್(3)124/10–11, ದಿನಾಂಕ:17/01/2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಸುಗುಮಾರ್, ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ಹಾಗೂ ಮಾನ್ಯ ನಗರ ಪಾಲಿಕೆ ಸದಸ್ಯರು (ವಾರ್ಡ್ ನಂ. 51, ವಿಜಿನಾಪುರ) ಮನವಿಯನ್ನು ಸಲ್ಲಿಸಿ, ವಾರ್ಡ್‌ನಂ. 51 ಅತೀ ಹಿಂದುಳಿದ ವಾರ್ಡ್ ಆಗಿದ್ದು, ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಎರಡು ಅತೀ ದೊಡ್ಡ ಕೊಳಚೆ ಪ್ರದೇಶವಿದ್ದು, ಸುಮಾರು 5000 ಮನೆಗಳಿರುತ್ತವೆ. ಈ ಪ್ರದೇಶದಲ್ಲಿನ ನಿವಾಸಿಗಳಿಗೆ ಉತ್ತಮ ನಾಗರೀಕ ಸೌಲಭ್ಯಗಳನ್ನು

ಒದಗಿಸುವ್ಯದು ಅತ್ಯವಶ್ಯಕವಾಗಿರುತ್ತವೆಂದು, ತಮ್ಮ ವಾರ್ಡ್ ಮೀಸಲು ವಾರ್ಡ್ ಆಗಿದ್ದು, ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಜನರು ವಾಸವಾಗಿರುತ್ತಾರೆಂದು ತಿಳಿಸಿ, ತಮ್ಮ ವಾರ್ಡ್ ಅಭಿವೃದ್ದಿಗಾಗಿ ಒಟ್ಟು 14 ಕಾಮಗಾರಿಗಳ ವಿವರಗಳನ್ನು ನೀಡಿ, ಶೇ. 22.75 ರ ಅನುದಾನದಡಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ರೂ. 1080.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಒದಗಿಸಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 51 ರಲ್ಲಿ ಸಾರ್ವಜನಿಕ ಸಿವಿಲ್ ಕಾಮಗಾರಿಗಳಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು/ ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಕೋರಿರುವ ರೂ. 1080.00 ಲಕ್ಷಗಳ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ:–</u>*** ಮಾನ್ಯ ಆಯುಕ್ತರ ದಿನಾಂಕ:17/01/2011 ರ ಟಿಪ್ಪಣಿಯನ್ನು ಒಪ್ಪಿದೆ.

**ಅಧ್ಯಕ್ಷರು,**
**ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ**

**<u>ಪ್ರತಿಯನ್ನು:–</u>**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಯುಕ್ತರವರ ಆಪ್ತಕಾರ್ಯದಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ/ವಿರೋಧ ಪಕ್ಷ ಮತ್ತು ಜೆ.ಡಿ.ಎಸ್ ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
- ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಕಳುಹಿಸಿದೆ.
- ಅಪರ ಆಯುಕ್ತರು (ಆರೋಗ್ಯ)/(ಕಲ್ಯಾಣ)/ಮತ್ತು(ಆಸ್ತಿಗಳು) ರವರ ಅವಗಾಹನೆಗೆ ಕಳುಹಿಸಿದೆ.
- ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರವರಿಗೆ ಕಳುಹಿಸಿದೆ.
- ಎಲ್ಲಾ ವಲಯಗಳ ಮುಖ್ಯ ಅಭಿಯಂತರರು ರವರ ಅವಗಾಹನೆಗೆ ಕಳುಹಿಸಿದೆ.
- ಉಪ ಆಯುಕ್ತರು (ಕಲ್ಯಾಣ) ಹಾಗೂ ಕಲ್ಯಾಣ ಅಧಿಕಾರಿ (ಕೇಂದ್ರ ಕಛೇರಿ) ರವರಿಗೆ ಕಳುಹಿಸಿದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
- ಕೌನ್ಸಿಲ್ ಕಾರ್ಯದರ್ಶಿ/ಅಧಿಕ ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸಿದೆ.
- ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:21/02/2011 ರಂದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರ ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|
| ಪಿ. ಸುಗುಮಾರ್ | ಅಧ್ಯಕ್ಷರು | ಅಪರ ಆಯುಕ್ತರು (ದಕ್ಷಿಣ) |
| ಶ್ರೀ.ವಿದ್ಯಾ.ಎನ್ | ಸದಸ್ಯರು | ಜಂಟಿ ಆಯುಕ್ತರು (ಪಶ್ಚಿಮ) |
| ಭುವನೇಶ್ವರಿ. ಜೆ. | ಸದಸ್ಯರು | ಉಪ ಆಯುಕ್ತರು (ಪಶ್ಚಿಮ) |
| ಎಂ. ಶ್ರೀನಿವಾಸ್ | ಸದಸ್ಯರು | ಉಪ ಆಯುಕ್ತರು (ದಕ್ಷಿಣ) |
| ಕೆ. ಮಹೇಶ್ ಬಾಬು | ಸದಸ್ಯರು | ಮುಖ್ಯ ಅಭಿಯಂತರರು (ಮಹದೇವಪುರ) |
| ವಿ. ಆನಂದ್ | ಸದಸ್ಯರು | ಮುಖ್ಯ ಅಭಿಯಂತರರು (ಯಲಹಂಕ) |
| ಬಿ.ಆರ್. ಚಂದ್ರಶೇಖರ್ | ಸದಸ್ಯರು | ವಿದ್ಯಾಧಿಕಾರಿ |
| ಮುನಿಸ್ವಾಮಿ ಗೌಡ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಯೋಜನಾಧಿಕಾರಿ, ನಗರ ಆರೋಗ್ಯ) |
| ಲೋಕೇಶ್ | **ಸದಸ್ಯರು** | ಕಲ್ಯಾಣಾಧಿಕಾರಿ (ಪೂರ್ವ) |
| ಆರ್.ಉದಯಕುಮಾರ್ | ಸದಸ್ಯರು | ಅಧೀಕ್ಷಕ ಅಭಿಯಂತರರು (ಯಲಹಂಕ) |
| | | ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ) |
| | | ಕಾರ್ಯಪಾಲಕ ಅಭಿಯಂತರರು (ಚಾಮರಾಜಪೇಟೆ) |
| | | ಕಾರ್ಯಪಾಲಕ ಅಭಿಯಂತರರು (ಮಹದೇವಪುರ) |
| | | ಕಾರ್ಯಪಾಲಕ ಅಭಿಯಂತರರು(ಕಾ.ಮ.ಕೂ.ಕ ಮತ್ತು ಯೋಜನಾ ಸಮನವ್ಯ ಅಧಿಕಾರಿ (RCH) |
| | | ಕಾರ್ಯಪಾಲಕ ಅಭಿಯಂತರರು–ಯೋಜನೆ (ಆರ್.ಆರ್.ನಗರ) |
| | | ಕಾರ್ಯಪಾಲಕ ಅಭಿಯಂತರರು (ಕೆ.ಆರ್.ಪುರ) |
| | | ಕಾರ್ಯಪಾಲಕ ಅಭಿಯಂತರರು(ಯೋಜನೆ – ಮಹದೇವಪುರ) |
| | | ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) |
| | | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಶವಂತಪುರ) |
| | | ಸಹಾಯಕ ಅಭಿಯಂತರರು (ವಾರ್ಡ್ ನಂ.82) |

| | | |
|---|---|---|
| | | ಸಹಾಯಕ ಅಭಿಯಂತರರು (ವಾರ್ಡ್ ನಂ.139) |

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 14/10–11**

ಆಯುಕ್ತರ ಟಿಪ್ಪಣಿ ದಿನಾಂಕ:03/02/2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 16 ರ ಜಾಲಹಳ್ಳಿಯಲ್ಲಿ ಬರುವ ಸಿದ್ದಾರ್ಥನಗರ ಮತ್ತು ಖಾತಾನಗರ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಪ್ರದೇಶಗಳಲ್ಲಿ ಕಾರ್ಯಗತಗೊಳಿಸಲು ನಿರ್ಧರಿಸಿರುವ ಒಟ್ಟು 4 ಕಾಮಗಾರಿಗಳ ಅಂದಾಜು ಮೊತ್ತ ರೂ.198.60 ಲಕ್ಷಗಳಿಗೆ ಶೇ.22.75% ಕಾಮಗಾರಿಗಳು ಪಿ1878 ಲೆಕ್ಕಶೀರ್ಷಿಕೆಯಡಿ ಅನುದಾನ ಲಭ್ಯವಿಲ್ಲದ ಕಾರಣ ಮಾನ್ಯ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಸಂಖ್ಯೆ ತೆ.ಆ.ಸ್ಥಾ.ಸ/ಪಿಆರ್/86/2010–11 ದಿನಾಂಕ:18/11/2010 ರಲ್ಲಿ 2010–11 ನೇ ಸಾಲಿನ ತುರ್ತು ಕಾಮಗರಿಗಳಿಗಾಗಿ ಮೀಸಲಿಟ್ಟ ಅನುದಾನದಲ್ಲಿ ಪಿ0541 ಲೆಕ್ಕಶೀರ್ಷಿಕೆಯಡಿ ಕಾಮಗಾರಿ ಸಂಕೇತ ನೀಡಿ ಅಗತ್ಯ ಕ್ರಮಕೈಗೊಳ್ಳಲು ಕೋರಿದ್ದು, ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನದಲ್ಲಿ ಪಿ0541 ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನದಲ್ಲಿ ಈ ಕೆಳಕಂಡ 4 ಕಾಮಗಾರಿಗಳಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಗಳನ್ನು ನಿರ್ವಹಿಸಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

| Sl. No. | Name of Works | Est. Amount |
|---|---|---|
| 1 | Improvement to roads drains and culverts and other development works in katanagara slum area in W.NO.16 | Rs.49.60 Lakhs |
| 2 | Improvement to roads drains and culverts and other development works in East side of Sidhartha nagar slum area in W.NO.16 | Rs.49.70 Lakhs |
| 3 | Improvement to roads drains and culverts and other development works in West side of Sidhartha nagar slum area in W.NO.16 | Rs.49.80 Lakhs |
| 4 | Improvement to roads drains and culverts and other development works in Sidhartha nagar colony in W.NO.16 | Rs.49.50 Lakhs |
| | **Total** | **Rs.198.60 Lakhs** |

**ನಿರ್ಣಯ:** ದಿನಾಂಕ: 3/02/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 18/10-11**

ಆಯುಕ್ತರ ಟಿಪ್ಪಣಿ ಸಂಖ್ಯೆ:ಅ.ಆ/ ರಾ.ರಾ.ನ(ಯೋ)/ಪಿ.ಆರ್/ 2726/10-11, ದಿನಾಂಕ:25/01/2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಗೆ 2010-11ನೇ ಸಾಲಿಗೆ ಶೇ.22.75 ರ ಅನುದಾನದಡಿಯಲ್ಲಿ ರೂ.1625.08 ಲಕ್ಷಗಳನ್ನು ಉಲ್ಲೇಖ (1) ರಂತೆ ಮರುಹಂಚಿಕೆ ಮಾಡಲಾಗಿದೆ. ಅದರಂತೆ ಸ್ಥಳೀಯ ಮಹಾನಗರ ಪಾಲಿಕೆ ಸದಸ್ಯರುಗಳು ಮಾಡಿರುವ ಮನವಿಯ ಮೇರೆಗೆ, ಶೇ.22.75 ರ ಅನುದಾನವನ್ನು ವಾರ್ಡ್‌ವಾರು ಮರುಹಂಚಿಕೆ ಮಾಡಿ ವಲಯ ಮಟ್ಟದಲ್ಲಿ ತಯಾರಿಸಿರುವ ಕ್ರಿಯಾ ಯೋಜನೆಯ ಕಾಮಗಾರಿ ಮೊತ್ತ ರೂ.1625.08 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ಪಡೆದು ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ: 25/01/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 19/10-11**

ಆಯುಕ್ತರ ಟಿಪ್ಪಣಿ ಸಂಖ್ಯೆ:*ಅಆ(ಕ/ಆ)ಪಿಎಸ್‌ಆರ್(3)130/10-11* ದಿನಾಂಕ:03/02/2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿ ಕೇಂದ್ರಗಳಲ್ಲಿ 2006-07, 2007-08 ಮತ್ತು 2008-09 ನೇ ಸಾಲುಗಳಲ್ಲಿ ತರಬೇತಿಯನ್ನು ಪಡೆದುಕೊಂಡಂತಹ ಅಭ್ಯರ್ಥಿಗಳಿಗೆ ಪಾಲಿಕೆವತಿಯಿಂದ ಹೊಲಿಗೆ ಯಂತ್ರಗಳನ್ನು ಖರೀದಿಸಿ ಉಚಿತವಾಗಿ ವಿತರಿಸಬೇಕಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ | ವಲಯ | ಅವಧಿ | ಹೊಲಿಗೆ ಯಂತ್ರಗಳ ಸಂಖ್ಯೆ |
|---|---|---|---|
| 1 | ಪೂರ್ವ | 2006-07 ರಿಂದ 2008-09 | 6155 |
| 2 | ಪಶ್ಚಿಮ | 2006-07 ರಿಂದ 2008-09 | 6566 |
| 3 | ದಕ್ಷಿಣ | 2006-07 ರಿಂದ 2008-09 | 6322 |
| | | ಒಟ್ಟು | 19043 |

ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಪ್ರತ್ಯಾಯೋಜಿಸಿರುವ ಹಿನ್ನಲೆಯಲ್ಲಿ, ಹೊಲಿಗೆ ಯಂತ್ರಗಳನ್ನು ಖರೀದಿಸಲು ವಲಯಮಟ್ಟದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಸಂಸ್ಥೆಗಳು **ತಾಂತ್ರಿಕವಾಗಿ ಅರ್ಹತೆ ಹೊಂದಿಲ್ಲದ ಕಾರಣ ಕೆ.ಪಿ.ಟಿ.ಟಿ ಕಾಯ್ದೆಯಡಿಯಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆಯಲು ಅವಕಾಶವಿರುವುದಿಲ್ಲವೆಂದು** ಮೂರು ವಲಯಗಳ ಅಪರ/ಜಂಟಿ ಆಯುಕ್ತರು ವರದಿ ಮಾಡಿರುತ್ತಾರೆ.

ಪ್ರಸ್ತುತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರಗಳು ಜಾರಿಯಲ್ಲಿದ್ದು ಹಿಂದಿನ ಪೆಡಲಿಂಗ್ ಹೊಲಿಗೆ ಯಂತ್ರಗಳು ಇತ್ತೀಚೆಗೆ ಬೇಡಿಕೆಯಿಲ್ಲದೆ, ಮಾರುಕಟ್ಟೆಯಲ್ಲಿ ಬಹಳ ವಿರಳವಾಗಿರುವ ಕಾರಣ ಯಾವುದೇ ಸಂಸ್ಥೆಗಳು ಈ ಹೊಲಿಗೆ ಯಂತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸರಬರಾಜು ಮಾಡಲು ಮುಂದೆ ಬರುತ್ತಿಲ್ಲದೆ ಇರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ, ಪೂಜ್ಯ ಮಹಾಪೌರರ ಹಾಗೂ ಸಮಿತಿಯ ಅಧ್ಯಕ್ಷರುಗಳ ಸಮ್ಮುಖದಲ್ಲಿ ಚರ್ಚಿಸಲಾದಂತೆ ಪ್ರಸ್ತುತ ಟೆಂಡರ್‌ನಲ್ಲಿ ಅಳವಡಿಸಲಾಗಿರುವ ಕೆಲವು ಷರತ್ತುಗಳನ್ನು ಮಾರ್ಪಾಡಿಸಲು ಪ್ರಸ್ತುತ ಕರೆಯಲಾಗಿರುವ ಟೆಂಡರನ್ನು ಕೈಬಿಟ್ಟು ಮರು ಟೆಂಡರ್ ಕರೆಯಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಮರು ಟೆಂಡರ್ ಕರೆಯಲು ಮಂಡಿಸಿರುವ ದಿನಾಂಕ: 03/02/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 20/10–11**

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(3)128/10–11 ದಿನಾಂಕ:02–02–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯ ಬ್ಯಾಟರಾಯನ ಪುರ ವಿಭಾಗಕ್ಕೆ ಸೇರಿದ ಕೊಡಿಗೇ ಹಳ್ಳಿ ಉಪವಿಭಾಗದ ವ್ಯಾಪ್ತಿಯ ವಾರ್ಡ್ ನಂ. 7 (ಬ್ಯಾಟರಾಯನಪುರ) ದ ಮಾನ್ಯ ಬಿ.ಬಿ.ಎಂ.ಪಿ. ಸದಸ್ಯರಾದ ಶ್ರೀಮತಿ ಇಂದಿರಾ ರವರು ತಮ್ಮ ಪತ್ರದಲ್ಲಿ ತಮ್ಮ ಕ್ಷೇತ್ರದ ಜನಸಂಖ್ಯೆಯ ಹೆಚ್ಚಿನ ಭಾಗದಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರಾಗಿರುತ್ತಾರೆಂದು ಶೇ. 22.75 ಅನುದಾನದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡಲು ಫಲಾನುಭವಿಗಳು ಲಭ್ಯವಿರುವುದಾಗಿ ಕೇಳಕಂಡಂತೆ ವಿವರಗಳನ್ನು ನೀಡಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿ ಮನೆಗಳನ್ನು ನಿರ್ಮಿಸಿ ಕೊಡಲು ಕೋರಿರುತ್ತಾರೆ.

| ಕ್ರ.ಸಂ. | ಗ್ರಾಮದ ಹೆಸರು | ಬೇಕಾಗಿರುವ ಮನೆಗಳ ಸಂಖ್ಯೆ | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|---|
| 1 | ಬ್ಯಾಟರಾಯನ ಪುರ | 10 | 30.00 |
| 2 | ಸಂಜೀವಿನಿ ನಗರ | 40 | 120.00 |
| 3 | ಅಮೃತಹಳ್ಳಿ | 20 | 60.00 |
| 4 | ಜಕ್ಕೂರು ಗ್ರಾಮ | 30 | 90.00 |
| 5 | ಜಕ್ಕೂರು ಬಡಾವಣೆ | 30 | 90.00 |
| 6 | ಕೆಂಪಾಪುರ | 25 | 75.00 |
| 7 | ಸಂಜೀವಿನಿ ನಗರ (ಪೇಸ್–2) | 25 | 75.00 |
| 8 | ಜಕ್ಕೂರು ಗ್ರಾಮ ಮತ್ತು ಬಡಾವಣೆ (ಪೇಸ್ –2) | 25 | 75.00 |
| 9 | ಕೆಂಪಾಪುರ (ಪೇಸ್ –2) | 20 | 60.00 |
| | | **225** | **675.00** |

ಜಂಟಿ ಆಯುಕ್ತರು (ಯಲಹಂಕ) ರವರಿಂದ ಪ್ರಸ್ತಾವಿತ ವಾರ್ಡಿನಲ್ಲಿ ಒಟ್ಟು 225 ಮನೆಗಳ ನಿರ್ಮಾಣಕ್ಕೆ ರೂ. 675 ಲಕ್ಷಗಳ ಹೆಚ್ಚುವರಿ ಅನುದಾನದ ಬೇಡಿಕೆಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 7 ರಲ್ಲಿ ಒಟ್ಟು 225 ಮನೆಗಳನ್ನು ನಿರ್ಮಿಸಲು ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ರೂ. 675.00 ಲಕ್ಷಗಳ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

*–ಮುಂದೂಡಿದೆ–*

**<u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 21/10–11</u>**

ಆಯುಕ್ತರ ಟಿಪ್ಪಣಿ ದಿನಾಂಕ:03–02–2011ರಲ್ಲಿ ವಿವರಿಸಿರುವಂತೆ, 2010–11ನೇ ಸಾಲಿನಲ್ಲಿ ಶೇ.22.75% ರ ವಾರ್ಡ್‌ವಾರು ಅನುದಾನದಡಿಯಲ್ಲಿ ವಾರ್ಡ್ ಸದಸ್ಯರು

ಸೂಚಿಸುವ ಹಾಗೂ ವಾರ್ಡ್‌ವಾರು ನಿಗಧಿಪಡಿಸಿರುವ ಮಿತಿಗೆ ಒಳಪಟ್ಟು ಅಗತ್ಯವಿರುವ ಶೇ.22.75% ರ ಕೆಲಸ ಕಾಮಗಾರಿಗಳ ಪಟ್ಟಿಯನ್ನು ತಯಾರಿಸಲಾಗಿದ್ದು, ಈ ಎಲ್ಲಾ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದ ಪೂರ್ವ ಅನುಮತಿ ಪಡೆದು ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ಸೂಚಿಸಿದೆ. ಅದರಂತೆ ಜಂಟಿ ಆಯುಕ್ತರು (ಯಲಹಂಕ ವಲಯ) ರವರು ಈ ಕೆಳಕಂಡ ವಾರ್ಡ್‌ಗಳಿಗೆ 2010–11ನೇ ಸಾಲಿನಲ್ಲಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳ ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

| ವಾರ್ಡ್ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| ವಾರ್ಡ್ ನಂ.1 | 8 | 107.89 |
| ವಾರ್ಡ್ ನಂ.2 | 8 | 107.89 |
| ವಾರ್ಡ್ ನಂ.3 | 6 | 107.91 |
| ವಾರ್ಡ್ ನಂ.4 | 5 | 107.90 |
| ವಾರ್ಡ್ ನಂ.5 | 3 | 107.91 |
| ವಾರ್ಡ್ ನಂ.6 | 5 | 107.91 |
| ವಾರ್ಡ್ ನಂ.7 | 7 | 108.09 |
| ವಾರ್ಡ್ ನಂ.8 | 9 | 107.91 |
| ವಾರ್ಡ್ ನಂ.9 | 8 | 107.91 |
| ವಾರ್ಡ್ ನಂ.10 | 2 | 107.46 |
| ವಾರ್ಡ್ ನಂ.11 | 6 | 107.91 |

ಮೇಲ್ಕಂಡ ವಾರ್ಡ್‌ಗಳ ಕಾಮಗಾರಿಗಳ ಪ್ರಸ್ತಾವನೆಗೆ ಸ್ಥಾಯಿ ಸಮಿತಿಯ ಅನುಮೋದನೆಗೆ ಸಲ್ಲಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ: 03/02/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 22/10-11**

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(3)127/10-11 ದಿನಾಂಕ:31/01/2011 ರಲ್ಲಿ ವಿವರಿಸಿರುವಂತೆ ಶ್ರೀ ಎನ್. ಜಯಪಾಲ. ಸದಸ್ಯರು. ವಾರ್ಡ್ ನಂ. 45 (ಮಲ್ಲೇಶ್ವರಂ) ಮನವಿ ಸಲ್ಲಿಸಿ, ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ವಾಸವಾಗಿರುವ ಮನೆಗಳು ಶಿಥಿಲಗೊಂಡಿರುವುದರಿಂದ ಶೇ 22.75 ರ ಯೋಜನೆಯಡಿಯಲ್ಲಿ ಉಲ್ಲೇಖ (1) ಮತ್ತು (2) ರ ಕಡತದ ಪ್ರಸ್ತಾವನೆಯಂತೆ 25 ಫಲಾನುಭವಿಗಳಿಗೆ ಮನೆಗಳನ್ನು ಪುನರ್ ನಿರ್ಮಿಸಲು ಒಟ್ಟು ಅಂದಾಜು ವೆಚ್ಚ ರೂ. 79.50 ಲಕ್ಷಗಳ ಪ್ರಸ್ತಾವನೆ ಜಂಟಿ ಆಯುಕ್ತರು (ಪಶ್ಚಿಮ) ವಲಯದಿಂದ ಬಂದಿರುತ್ತದೆ.

ಅದರಂತೆ ಪರಿಶೀಲಿಸಲಾಗಿ, ಪ್ರಸ್ತಾವಿತ ವಾರ್ಡ್‌ಗೆ ಶೇ. 22.75 ರ ಅನುದಾನದಡಿ ಕಾಮಗಾರಿಗಳಿಗೆ ರೂ. 120.85 ಲಕ್ಷಗಳ ಅನುದಾನ ಲಭ್ಯವಿದ್ದು, ಸದರಿ ಅನುದಾನವನ್ನು ಬಳಸಿಕೊಳ್ಳುವ ಕುರಿತು ಪ್ರತ್ಯೇಕ ಪ್ರಸ್ತಾವನೆ ಚಾಲ್ತಿಯಲ್ಲಿರುವುದಾಗಿ ವರದಿಯಾಗಿದ್ದು, ಸದರಿ ಪ್ರಸ್ತಾವನೆಯು ಹೆಚ್ಚುವರಿ ಅನುದಾನದ ಬೇಡಿಕೆಯ ಪ್ರಸ್ತಾವನೆಯಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 45ರ ಒಟ್ಟು 25 ಮನೆಗಳನ್ನು ನಿರ್ಮಿಸಲು ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ರೂ. 79.50 ಲಕ್ಷಗಳ ಅಧಿಕ ಮೊತ್ತದ ಅನುದಾನದ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ: 31/01/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 23/10-11**

ಆಯುಕ್ತರ ಟಿಪ್ಪಣಿ ದಿನಾಂಕ:02/02/2011 ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ.82ರ ಕಾವೇರಿ ನಗರದಲ್ಲಿ ಕೊಳಚೆ ಪ್ರದೇಶಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ ಹಾಗೂ ಘಖಖಗಕ ಎಂಬ ಸ್ವಯಂ ಸೇವಾ ಸಂಸ್ಥೆಯ ವತಿಯಿಂದ ಕೊಳಚೆ ಪ್ರದೇಶಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಯೋಜನೆಯಲ್ಲಿ ಕಾವೇರಿ ನಗರದ ನಾಲ್ಕು ಕಡೆ ಸಾಮೂಹಿಕ ಶೌಚಾಲಯಗಳನ್ನು ನಿರ್ಮಿಸಿ ಡಿ ವ್ಯಾಟ್ ಸಿಸ್ಟಂ ಮೂಲಕ ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಬೇಕಾಗುವ ನೀರನ್ನು ಒದಗಿಸಲು ಕೊಳವೆ ಬಾವಿಗಳು ಇಲ್ಲದೆ ಇರುವುದರಿಂದ ಈ ಸಾಮೂಹಿಕ ಶೌಚಾಲಯಗಳ ನಿರ್ವಹಣೆಯು ಕಷ್ಟಕರವಾಗಿರುತ್ತದೆ.

ಈ ಪ್ರದೇಶದಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರು ಹಾಗೂ ಹಿಂದುಳಿದ ವರ್ಗಗಳು ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚಿನ ಜನ ವಸತಿ ಕೊಳಚೆ ಪ್ರದೇಶವಾಗಿರುತ್ತದೆ. ಆದುದರಿಂದ ಸದರಿ ಶೌಚಾಲಯಗಳಿಗೆ ಮತ್ತು ಈ ಕೊಳಚೆ ಪ್ರದೇಶಕ್ಕೆ ನೀರು ಸರಬರಾಜು ಮಾಡಬೇಕಾಗಿರುತ್ತದೆ. ಮುಂದುವರೆದು ಸ್ಥಳೀಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು ಸ್ಥಳ ಪರಿವೀಕ್ಷಣೆ ಮಾಡಿ ಸದರಿ ಪ್ರದೇಶದಲ್ಲಿ ಎರಡು ಹೊಸ ಕೊಳವೆ ಬಾವಿಗಳನ್ನು ಕೊರೆಸಿ ಹಾಗೂ ನೀರು ಸಂಪರ್ಕಕ್ಕೆ ವ್ಯವಸ್ಥೆ ಮಾಡಲು ಸೂಚಿಸಿರುತ್ತಾರೆ. ಅದರಂತೆ ಸದರಿ ಕಾಮಗಾರಿಯ ಅತ್ಯವಶ್ಯಕವಾಗಿರುತ್ತದೆ.

ಆದುದರಿಂದ, ಸದರಿ ಕಾಮಗಾರಿಯನ್ನು 2010–11ನೇ ಸಾಲಿನ ಲೋಕೋಪಯೋಗಿ ಇಲಾಖೆ ಮತ್ತು ಪಿ.ಆರ್.ಇ.ಡಿ. ದರ ಪಟ್ಟಿಯಂತೆ ರೂ.9.50/– ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಶೇ.22.75 ರ ಹೆಚ್ಚುವರಿ ಅನುದಾನದಲ್ಲಿ ಜಾಬ್ ಕೋಡ್, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲು ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

**<u>ನಿರ್ಣಯ:</u>** ದಿನಾಂಕ: 02/02/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**<u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 24/10–11</u>**

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿ.ಆರ್:103/10–11 ದಿನಾಂಕ:02/02/2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 33 ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸೂರ್ಯಚೇತನ ಸಾಮಾಜಿಕ ವಿಕಾಸ ಕೇಂದ್ರ ರವರು **<u>"ಕರ್ನಾಟಕದ ದಲಿತ ಕಿರಣಗಳು"</u>** ಎಂಬ ಪುಸ್ತಕವನ್ನು ಬರೆದಿದ್ದು, ಸದರಿ ಪುಸ್ತಕಗಳನ್ನು ಪಾಲಿಕೆಯ ಶಾಲಾ/ಕಾಲೇಜುಗಳ ಗ್ರಂಥಾಲಯಗಳಿಗೆ ಖರೀದಿಸಬೇಕೆಂದು ಮನವಿಯನ್ನು ಸಲ್ಲಿಸಿದ್ದು, ಉಲ್ಲೇಖ (1) ರಂತೆ ಪೂಜ್ಯ ಮಹಾಪೌರರು ಸದರಿ ಪುಸ್ತಕಗಳನ್ನು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಖರೀದಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಸದರಿ ಪುಸ್ತಕವು ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಕಲಿತ ಸಮುದಾಯ ಪ್ರಗತಿಗೆ ದುಡಿದಂತಹ ನಾಯಕರ ಹೋರಾಟದ ಜೀವನ ಚರಿತ್ರೆಗಳನ್ನು

ತಿಳಿಸುವ ನಿಟ್ಟಿನಲ್ಲಿ ಅತ್ಯಾವಶ್ಯಕವಾಗಿರುತ್ತದೆ. ತಲಾ ಒಂದು ಪುಸ್ತಕಕ್ಕೆ ರೂ.80.00 ಮುಖಬೆಲೆ ಇದ್ದು, ಪಾಲಿಕೆಯ ವಿದ್ಯಾರ್ಥಿಗಳಿಗಾಗಿ ತಲಾ ಒಂದು ಪುಸ್ತಕಕ್ಕೆ ರೂ.70.00 ರಂತೆ ಪ್ರೌಢಶಾಲೆಗಳಲ್ಲಿನ 7836, ಕಾಲೇಜುಗಳಲ್ಲಿನ 4909 ವಿದ್ಯರ್ಥಿಗಳೀಗೆ ಹಾಗೂ ತಲಾ ಶಾಲಾ/ಕಾಲೇಜು ಗ್ರಂಥಾಲಯಕ್ಕೆ 10 ಪುಸ್ತಕದಂತೆ 460 ಒಟ್ಟು 13205 ಪುಸ್ತಕಗಳನ್ನು ಖರೀದಿಸಲು 9,24,350.00 ವೆಚ್ಚವಾಗಲಿದೆ. ಸದರಿ ಪುಸ್ತಕವನ್ನು ಖರೀದಿಸಲು ಪಾಲಿಕೆಯ ಶಿಕ್ಷಣ ಇಲಾಖೆಯಲ್ಲಿ ಯಾವ್ಯದೇ ಆಯವ್ಯಯ ನಿಗಧಿಪಡಿಸದಿರುವ ಕಾರಣ ಪಾಲಿಕೆಯ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ಖರೀದಿಸಲು ಅನುಮತಿ ಕೋರಲಾಗಿದ್ದು, ಕಲ್ಯಾಣಾಧಿಕಾರಿಯವರು ಪರಿಶಿಷ್ಟ ಜಾತಿಯವರ ಕಲ್ಯಾಣ ಕಾರ್ಯಕ್ರಮಗಳು ಶೀ.16.20 ರ ಅನುದಾನದಲ್ಲಿ ಮೀಸಲಿರಿಸಿರುವ ರೂ.32.64 ಲಕ್ಷಗಳಲ್ಲಿ ಸದರಿ ಪುಸ್ತಕಗಳನ್ನು ಖರೀದಿಸಿ ಅದಕ್ಕೆ ತಗಲುವ ವೆಚ್ಚವನ್ನು ಭರಿಸಬಹುದೆಂದು ತಿಳಿಸಿರುತ್ತಾರೆ.

ತತ್ಸಂಬಂಧವಾಗಿ, 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪರಿಶಿಷ್ಟ ಜಾತಿಯವರ ಕಲ್ಯಾಣ ಕಾರ್ಯಕ್ರಮಗಳು ಶೀ.16.20 ರ ಅನುದಾನದಲ್ಲಿ ಮೀಸಲಿರಿಸಿರುವ ರೂ.32.64 ಲಕ್ಷಗಳಲ್ಲಿ ಸೂರ್ಯಚೇತನ ಸಾಮಾಜಿಕ ವಿಕಾಸ ಕೇಂದ್ರ ರವರು ಬರೆದಿರುವ

**"ಕರ್ನಾಟಕದ ದಲಿತ ಕಿರಣಗಳು"** ಎಂಬ 13205 ಪುಸ್ತಕಗಳನ್ನು ತಲಾ ರೂ.70 ರಂತೆ ಖರೀದಿಸಲು ತಗಲುವ ವೆಚ್ಚ ರೂ.9,24,350.00 ಗಳನ್ನು ಮಂಜೂರು ಮಾಡುವ ಸಂಬಂಧ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಮಂಡಿಸಿರುವ ಟಿಪ್ಪಣಿ.

**ಮುಂದೂಡಿದೆ**

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 25/10-11**

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(3)131/10-11 ದಿನಾಂಕ:07-02-2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್, ಶಾಸಕರು ಚಾಮರಾಜಪೇಟೆ ಕ್ಷೇತ್ರ ರವರು ಮನವಿ ಸಲ್ಲಿಸಿ, ವಾರ್ಡ್ ನಂ. 139 ರಲ್ಲಿ ಆನಂದಪುರಂ ಮತ್ತು ಭಕ್ಷಿಗಾರ್ಡನ್ ಬಡಾವಣೆಯು ಕೊಳಚೆ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡಗಳ ಜನರು ವಾಸವಿದ್ದು, ಅವರೆಲ್ಲರೂ ಹೆಂಚಿನ ಹಾಗೂ ಶೀಟ್ ಮನೆಗಳಲ್ಲಿ ವಾಸವಾಗಿರುವುದರಿಂದ ಇವರುಗಳಿಗೆ ಶೀ. 22.75 ರ ಅನುದಾನದಡಿ ಪ್ರಾಥಮಿಕ ಸೌಲಭ್ಯವಾದ ಕುಡಿಯುವ ನೀರು, ಒಳಚರಂಡಿ ಮತ್ತು ಶೌಚಾಲಯ ಇತ್ಯಾದಿಗಳನ್ನು ಕಲ್ಪಿಸುವ ಹಿನ್ನೆಲೆಯಲ್ಲಿ ಸಾರ್ವಜನಿಕ ಸಿವಿಲ್ ಕಾಮಗಾರಿಗಳಿಗೆ ಮಂಜೂರಾತಿ ನೀಡಬೇಕಾಗಿ ಕೋರಿರುತ್ತಾರೆ.

ಶ್ರೀ ಜಿ.ಎ. ಅಶ್ವಥನಾರಾಯಣ ಮಾನ್ಯ ಸದಸ್ಯರು, ಕೃ.ರಾ ಮಾರುಕಟ್ಟೆ, ವಾರ್ಡ್ ಸಂಖ್ಯೆ. 139 ರವರು ಮನವಿ ಸಲ್ಲಿಸಿ, ವಾರ್ಡ್ ನಂ. 139 ರಲ್ಲಿ ಆನಂದಪುರಂ ಮತ್ತು ಭಕ್ಷಿಗಾರ್ಡನ್

ಬಡಾವಣೆಯು ಕೊಳಚೆ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡಗಳ ಜನರು ವಾಸವಿದ್ದು, ಅವರೆಲ್ಲರೂ ಹೆಂಚಿನ ಹಾಗೂ ಶೀಟ್ ಮನೆಗಳಲ್ಲಿ ವಾಸವಾಗಿರುವುದರಿಂದ ಇವರುಗಳಿಗೆ ಶೇ. 22.75 ರ ಅನುದಾನದಡಿ ಪ್ರಾಥಮಿಕ ಸೌಲಭ್ಯವಾದ ಕುಡಿಯುವ ನೀರು, ಒಳಚರಂಡಿ ಮತ್ತು ಶೌಚಾಲಯ ಇತ್ಯಾದಿಗಳನ್ನು ಕಲ್ಪಿಸುವ ಹಿನ್ನೆಲೆಯಲ್ಲಿ ಸಾರ್ವಜನಿಕ ಸಿವಿಲ್ ಕಾಮಗಾರಿಗಳಿಗೆ ಮಂಜೂರಾತಿ ನೀಡಬೇಕಾಗಿ ಕೋರಿ, ಒಟ್ಟು ರೂ. 190.00 ಲಕ್ಷಗಳ ಕಾಮಗಾರಿಗಳ ವಿವರಗಳನ್ನು ಒದಗಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್, ಶಾಸಕರು ಚಾಮರಾಜಪೇಟೆ ಕ್ಷೇತ್ರ ರವರು ಮತ್ತು ಶ್ರೀ ಜಿ.ಎ. ಅಶ್ವಥ ನಾರಾಯಣ ಮಾನ್ಯ ಸದಸ್ಯರು, ವಾರ್ಡ್ ನಂ. 139 ರ ರೂ. 190.00 ಲಕ್ಷಗಳ ಕಾಮಗಾರಿಗಳಿಗೆ ಮಂಜೂರಾತಿ ಕೋರಿ ಸಲ್ಲಿಸಿರುವ ಮನವಿಯ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

*–ಮುಂದೂಡಿದೆ–*

**<u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 26/10–11</u>**

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(3)132/10–11 ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ. ಆರ್. ನಂಜುಂಡಪ್ಪ, ಸದಸ್ಯರು. ವಾರ್ಡ್ ನಂ. 17 (ಜೆ.ಪಿ. ಪಾರ್ಕ್) ಮನವಿ ಸಲ್ಲಿಸಿ, ಶೇ. 22.75ರ ಅನುದಾನದಡಿಯಲ್ಲಿ ಕೊಳಚೆ ಪ್ರದೇಶಗಳಲ್ಲಿ ಒಟ್ಟು 17 ಕಾಮಗಾರಿಗಳನ್ನು ಕೈಗೊಳ್ಳಲು ಸುಮಾರು ರೂ. 218.88 ಲಕ್ಷಗಳ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆಯನ್ನು ಕೋರಿರುತ್ತಾರೆ.

ಅಪರ ಆಯುಕ್ತರು (ಆರ್.ಆರ್.ನಗರ) ರವರು ಸಹ ಮಾನ್ಯ ಸದಸ್ಯರು ಸಲ್ಲಿಸಿರುವ ಅಭಿವೃದ್ಧಿ ಪ್ರಸ್ತಾವನೆಗಳು ತ್ವರಿತಗತಿಯಲ್ಲಿ ಪೂರ್ಣಗೊಳ್ಳಬೇಕಾಗಿರುವುದರಿಂದ ರೂ. 218.88 ಲಕ್ಷಗಳಿಗೆ ಕಾಮಗಾರಿ ಸಂಕೇತ, ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ವಾರ್ಡ್ ನಂ. 17 ರ ಒಟ್ಟು 17 ಕಾಮಗಾರಿಗಳಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರು ಕೋರಿರುವ ರೂ. 218.88 ಲಕ್ಷಗಳ ಕಾಮಗಾರಿಗಳ ಅನುಮೋದನೆಯ ಪರಿಶೀಲನೆಗೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:</u>** ದಿನಾಂಕ:07/02/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**<u>ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 27/10–11</u>**

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(3)133/10-11 ದಿನಾಂಕ:07-02-2011ರಲ್ಲಿ ವಿವರಿಸಿರುವಂತೆ, ಶ್ರೀ ಎ.ಎಂ. ಹನುಮಂತೇಗೌಡರು, ಮಾನ್ಯ ಸದಸ್ಯರು. ವಾರ್ಡ್ ನಂ. 72 ಮನವಿ ಸಲ್ಲಿಸಿ, ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ವಾಸಿಸುತ್ತಿದ್ದು, ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಶೇ 22.75 ರ ಯೋಜನೆಯಡಿಯಲ್ಲಿ ಒಟ್ಟು 11 ಕಾಮಗಾರಿಗಳನ್ನು ಕೈಗೊಳ್ಳಲು ಸುಮಾರು ರೂ. 214.35 ಲಕ್ಷಗಳ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆಯನ್ನು ಕೋರಿರುತ್ತಾರೆಂದು ಅಪರ ಆಯುಕ್ತರು (ಆರ್.ಆರ್.ನಗರ) ರವರು ತಿಳಿಸಿ, ಮಾನ್ಯ ಸದಸ್ಯರು ಸಲ್ಲಿಸಿರುವ ರೂ. 214.35 ಲಕ್ಷಗಳ 11 ಅಭಿವೃದ್ಧಿ ಕಾಮಗಾರಿಗಳ ಪ್ರಸ್ತಾವನೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಪ್ರದೇಶದಲ್ಲಿ ಶೇ. 22.75ರ ಅನುದಾನದ ಅಡಿಯಲ್ಲಿ ತೆಗೆದು ಕೊಳ್ಳಲಾಗಿದೆ ಎಂದು ದೃಢೀಕರಿಸಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಖ್ಯ ಲೆಕ್ಕಾಧಿಕಾರಿಗಳು ವಾರ್ಡ್-72 ಕ್ಕೆ ಸಂಬಂಧಿಸಿದಂತೆ ಶೇ. 22.75 ಲೆಕ್ಕ ಶೀರ್ಷಿಕೆಯಡಿ ಯಾವುದೇ ಕಾಮಗಾರಿ ಸಂಕೇತ ನೀಡಿರುವುದಿಲ್ಲವೆಂದು, ಹಾಗೂ ಶೇ. 22.75 ರ ಕಾಮಗಾರಿಗಳಿಗೆ ಪಿ1878 ಲೆಕ್ಕ ಶೀರ್ಷಿಕೆಯಡಿ ಒಟ್ಟಾರೆ ಕಾಮಗಾರಿ ಸಂಕೇತ ನೀಡಿರುವ ವಿವರಗಳನ್ನು ಈ ಕೆಳಕಂಡ ಘೋಷ್ವಾರೆಯಲ್ಲಿ ಒದಗಿಸಿರುತ್ತಾರೆ.

ರೂ. ಲಕ್ಷಗಳಲ್ಲಿ

| 2010-11 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟ ಅನುದಾನ | ಇದುವರೆವಿಗೂ ಕಾಮಗಾರಿ ಸಂಕೇತ ನೀಡಿರುವ ಮೊತ್ತ | ಬದಲಿ ಕಾಮಗಾರಿ ಸಂಕೇತ ನೀಡಿರುವ ಮೊತ್ತ | ಹೆಚ್ಚುವರಿಯಾಗಿ ನೀಡಿರುವ ಮೊತ್ತ | ಮಾನ್ಯ ಆಯುಕ್ತರವರಿಂದ ಅನುಮೋದನೆಗೊಂಡು ಹಾಲಿ ಪ್ರಸ್ತಾವನೆಯಲ್ಲಿರುವ ಮೊತ್ತ |
|---|---|---|---|---|
| 1740.00 | 3555.45 | 192.00 | 1623.45 | 1263.00 |

ಶೇ. 22.75 ರ ಕಾಮಗಾರಿಗಳು ಲೆಕ್ಕ ಶೀರ್ಷಿಕೆಯಡಿ ರೂ. 1623.45 ಲಕ್ಷಗಳಿಗೆ ಹೆಚ್ಚುವರಿಯಾಗಿ ಸಂಕೇತ ನೀಡಲಾಗಿದ್ದು, ಪರಿಷ್ಕೃತ ಆಯವ್ಯಯ 2010-11 ರಲ್ಲಿ ಹೆಚ್ಚುವರಿಯಾಗಿ ಅನುದಾನ ಒದಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿರುವುದಾಗಿ, ವಾರ್ಡ್ ನಂ. 72 ರ 11 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ. 214.35 ಲಕ್ಷಗಳಿಗೆ ಸಂಕೇತ ನೀಡಲು ಪರಿಷ್ಕೃತ ಆಯವ್ಯಯ 2010-11 ರಲ್ಲಿ ಶೇ. 22.75 ರ ಕಾಮಗಾರಿಗಳು ಪಿ1787 ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿಯಾಗಿ ಅನುದಾನ ಒದಗಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಪೂರ್ವಾನುಮತಿ ಪಡೆಯಬೇಕಾಗಿರುವುದಾಗಿ ವರದಿ ಮಾಡಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸೂಕ್ತ ನಿರ್ಣಯಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ:07/02/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 28/10–11**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಿ ಕೊಡುವ ಕುರಿತು

ಪ್ರಸ್ಥಾವನೆ:– ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಲ್ಯಾಣ ಕಾಮಗಾರಿಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಫೆಬ್ರವರಿ–ಮಾರ್ಚ್ ತಿಂಗಳು ಆರಂಭಗೊಂಡಿದ್ದು, ಬೇಸಿಗೆ ಕಾಲವಾದ್ದರಿಂದ; ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಪ್ರತಿ ವಾರ್ಡಿನ ಕೊಳಚೆ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ನೀರಿನ ಸಮಸ್ಯೆಯನ್ನು ಬಗೆಹರಿಸುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿದೆ.

ನಿರ್ಣಯ:– ಈ ಸಾಲಿನ ಬೇಸಿಗೆ ಈಗಾಗಲೇ ಪ್ರಾರಂಭಗೊಂಡಿದ್ದು, ಕೊಳಚೆ ಪ್ರದೇಶದ ನಿವಾಸಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಕೊಳಚೆ ಪ್ರದೇಶಗಳಲ್ಲಿ ಅಗತ್ಯತೆಗೆ ಅನುಗುಣವಾಗಿ ಪ್ರತಿ ವಾರ್ಡಿಗೆ ಗರಿಷ್ಠ ಮೂರು ಕೊಳವೆ ಬಾವಿಗಳನ್ನು ಕೊರೆದು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಕುಡಿಯುವ ನೀರಿನ ಸಂಪರ್ಕವನ್ನು ಕಲ್ಪಿಸುವ ಪ್ರಸ್ತಾವನೆಗೆ ಸೂಕ್ತ ನಿರ್ಣಯಕ್ಕಾಗಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ಸಮಿತಿಯು ತೀರ್ಮಾನಿಸಿತು.

**ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 29/10–11**

ಆಯುಕ್ತರ ಟಿಪ್ಪಣಿ ಸಂಖ್ಯೆ: MOH(MCH &FW)PR 75/2010–11 ರಿದಿನಾಂಕ:02–02–2011ರಲ್ಲಿ ವಿವರಿಸಿರುವಂತೆ, ಸರ್ಕಾರದ ಹಲವಾರು ಜನಪರ ಕಾರ್ಯಕ್ರಮಗಳ ಪೈಕಿ ಕಡುಬಡಜನರಿಗೆ ಆರೋಗ್ಯ ವಿಮಾ ಸೌಲಭ್ಯ ಒದಗಿಸುವುದು ಸಹ ಅತ್ಯಂತ ಮುಖ್ಯವಾದ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರಮದ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ವಾಸಿಸುವ ಎಲ್ಲಾ ಬಡವರು ಮತ್ತು ಅತ್ಯಂತ ಕಡುಬಡವರ ವರ್ಗದವರಾದ ಬಿಪಿಎಲ್ ಕಾರ್ಡು ಹೊಂದಿರುವವರಿಗೆ, ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರಿಗೆ, ಖಾಯಂ ಮತ್ತು ಗುತ್ತಿಗೆ ಪೌರಕಾರ್ಮಿಕರು, ಸಫಾಯಿಕರ್ಮಚಾರಿಗಳು, ಆಟೋರಿಕ್ಷಾ ಚಾಲಕರು ಗಳಿಗೆ, ಆರೋಗ್ಯ ವಿಮಾ ಸೌಲಭ್ಯವನ್ನು ನೀಡುವ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಈ ಕಾರ್ಯಕ್ರಮದ ಸದುದ್ದೇಶವಾಗಿರುತ್ತದೆ, ಈ ಕಾರ್ಯಕ್ರಮದ ಅನುಷ್ಠಾನದಿಂದ ಈಗಾಗಲೇ ಪ್ರಜ್ವಲಿತವಾಗಿರುವ ಶ್ರೀಮಂತರಿಗೊಸ್ಕರ ಮಾತ್ರ ಸುಸಜ್ಜಿತ ಖಾಸಗಿ ಆಸ್ಪತ್ರೆಯನ್ನುವ ಮನೋಭಾವವನ್ನು ತೊಡೆದುಹಾಕಿ, ಬಡವರು ಮತ್ತು ಅತ್ಯಂತ ಕಡುಬಡವರ ಅನಾರೋಗ್ಯದ ಪರಿಸ್ಥಿತಿಯಲ್ಲಿ ಈಗಾಗಲೇ ಸರ್ಕಾರದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಅಡಿಯಲ್ಲಿ ಬಡಂಬಡಿಕೆ ಮಾಡಿಕೊಂಡಿರುವ ಎಲ್ಲಾ ಸುಸಜ್ಜಿತ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಉತ್ತಮ ಗುಣಮಟ್ಟದ ಉಚಿತವಾದ ರೋಗ ತಪಾಸಣೆ ಮತ್ತು ಉಚಿತವಾಗಿ ಚಿಕಿತ್ಸೆಯನ್ನು ಪಡೆಯಬಹುದಾಗಿರುತ್ತದೆ.

ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಿಪಿಎಲ್ ಕಾರ್ಡುದಾರರಿಗೆ, ಸಫಾಯಿ ಕರ್ಮಚಾರಿಗಳು, ಖಾಯಂ ಮತ್ತು ಗುತ್ತಿಗೆ ಪೌರಕಾರ್ಮಿಕರು, ಕೊಳಚೆ ಪ್ರದೇಶಗಳ ನಿವಾಸಿಗಳು, ಆಟೋರಿಕ್ಷಾ ಚಾಲಕರುಗಳಿಗೆ ಹಾಗೂ ಇತರರಿಗೆ ಆರೋಗ್ಯ ವಿಮೆ ಸೌಲಭ್ಯವಾದ ಸುವರ್ಣ ಆರೋಗ್ಯ ಸುರಕ್ಷಾ ವಿಮೆ ವಿಮಾ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ 407/2009–10 ದಿನಾಂಕ:–16/11/2009 ರಲ್ಲಿ ಅನುಮೋದನೆಯನ್ನು ನೀಡಲಾದ ಮೇರೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಪೌರ ಕಾರ್ಮಿಕರಿಗೆ ಸಫಾಯಿ ಕರ್ಮಚಾರಿ, ಬಿ.ಪಿ.ಎಲ್, ಕಾರ್ಡ್‌ದಾರರಿಗೆ ಕೊಳಚೆ ಪ್ರದೇಶಗಳ ನಿವಾಸಿಗಳು, ಆಟೋರಿಕ್ಷಾ ಚಾಲಕರುಗಳಿಗೆ ಯೋಜನೆಯನ್ನು ಹಮ್ಮಿಕೊಳ್ಳಲು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ/600/ಎಂಎನ್ ವೈ/2009(ಭಾ–1) ದಿನಾಂಕ; 12–10–2010 ರಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ ಆ.ಕು.ಕ216 ಸಿಜಿಇ2008, ದಿನಾಂಕ: 20–02–2009 ರ ಆದೇಶದ ಮಾದರಿಯಲ್ಲಿ ಹಾಗೂ ಅದರಲ್ಲಿ ನಿರ್ದಿಷ್ಟ ಪಡಿಸಿರುವ ಮಾರಣಾಂತಿಕ ಖಾಯಿಲೆಗಳಿಗೆ ಸಂಬಂಧಿಸಿದಂತೆ ಸುವರ್ಣ ಆರೋಗ್ಯ ಸುರಕ್ಷಾ ಎಂಬ ಆರೋಗ್ಯ ವಿಮೆ ಯೋಜನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬ ವರ್ಗದವರಿಗೆ, ಸಫಾಯಿ ಕರ್ಮಚಾರಿಗಳಿಗೆ, ಪೌರ ಕಾರ್ಮಿಕರು, ಆಟೋ ಚಾಲಕರು ಹಾಗೂ ಕೊಳಚೆ ಪ್ರದೇಶದ ನಿವಾಸಿಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆಂದು ಸೂಚಿಸಿ ಕೆಳಕಂಡ ಷರತ್ತುಗಳನ್ನು ವಿದಿಸಿರುತ್ತಾರೆ

1. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವ ಮೇಲ್ಕಂಡ ವರ್ಗದವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸತಕ್ಕದ್ದು.
2. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಅನುಷ್ಠಾನಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸುವುದು.
3. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಗೆ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸ ತಕ್ಕದ್ದು.
4. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಂಖ್ಯೆ: ಆ.ಕು.ಕ216 ಸಿಜಿಇ2008, ದಿನಾಂಕ: 20–02–2009 ರ ಆದೇಶದಲ್ಲಿ ನಿರ್ದಿಷ್ಟ ಪಡಿಸಿರುವ ಮಾದರಿಯಲ್ಲಿಯೆ ಯೋಜನೆ ಸಿದ್ದಪಡಿಸಿ ರೂಪರೇಷು ರೂಪಿಸಿಕೊಂಡು ಜಾರಿಗೊಳಿಸಲು ಕ್ರಮ ವಹಿಸುವುದು.

ಮೇಲ್ಕಂಡ ಸರ್ಕಾರದ ಆದೇಶದಲ್ಲಿನ ಷರತ್ತುಗಳಂತೆ ಕಾರ್ಯಕ್ರಮವನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಿ, ವಲಯ ಹಂತದಲ್ಲಿ ಅನುಷ್ಠಾನ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಬಹುದಾಗಿದೆ.

ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಚಿಸಿರುವ ಟ್ರಸ್ಟ್‌ನಡಿ ಕಾರ್ಯನಿರ್ವಹಿಸಲು ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಮುಖ್ಯಸ್ಥರಾಗಿದ್ದು ಇತರೆ ಇಲಾಖೆಗಳ ಕಾರ್ಯದರ್ಶಿಗಳು ಸದಸ್ಯರಾಗಿರುತ್ತಾರೆ ಸದರಿ ಸಮಿತಿಗೆ ನಿಗಧಿಪಡಿಸಿರುವ ಎಲ್ಲಾ ಜವಾಬ್ಧಾರಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡುವ ಸುವರ್ಣ ಆರೋಗ್ಯ ಸುರಕ್ಷ ಯೋಜನೆಯ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

ಸರ್ಕಾರದ ಮಟ್ಟದಲ್ಲಿ ಕಾರ್ಯಕಾರಿ ಸಮಿತಿ ಇರುವುದರಿಂದ ಈ ಯೋಜನೆಗೆ ತಗಲುವ ಪೂರ್ಣ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೇ ಭರಿಸುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಷ್ಟಾನದ ನೇರ ಹೊಣೆ ಹೊಂದಿರುವುದರಿಂದ ಪಾಲಿಕೆಯಲ್ಲೂ ಈ ಕೆಳಕಂಡಂತೆ ಉಂತಜಡಿಟಿಟಿಂ ಅಂಣಟಿಛಿಟ ರಚಿಸಬಹುದಾಗಿರುತ್ತದೆ.

| | |
|---|---|
| ಪೂಜ್ಯ ಮಹಾಪೌರರು | ಗೌರವಾಧ್ಯಕ್ಷರು |
| ಮಾನ್ಯ ಆಯುಕ್ತರು | ಕಾರ್ಯಾಧ್ಯಕ್ಷರು |
| ವಿಶೇಷ/ಅಪರ ಆಯುಕ್ತರು (ಆಡಳಿತ) | ಸದಸ್ಯರು |
| ಜಂಟಿ/ಉಪ ಆಯುಕ್ತರು (ಆರೋಗ್ಯ) | ಸದಸ್ಯರು |
| ಪ್ರಧಾನ ಅಭಿಯಂತರರು | ಸದಸ್ಯರು |
| ಮುಖ್ಯ ಲೆಕ್ಕಾಧಿಕಾರಿಗಳು | ಸದಸ್ಯರು |
| ಜಂಟಿ /ಉಪ ಆಯುಕ್ತರು (ಕಲ್ಯಾಣ) | ಸದಸ್ಯರು |
| ಮುಖ್ಯ ಆರೋಗ್ಯಾಧಿಕಾರಿಗಳು | ಕಾರ್ಯದರ್ಶಿಗಳು |
| ಯೋಜನಾ ಸಮನ್ವಯಾಧಿಕಾರಿಗಳು | ಸಹಕಾರ್ಯದರ್ಶಿಗಳು |

ಮೇಲ್ಕಂಡ ಸಮಿತಿಯು ಈ ಕೆಳಕಂಡಂತೆ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿದೆ.

ಸದರಿ ಯೋಜನೆಗೆ ತಗಲುವ ವೆಚ್ಚವನ್ನು ಪಾಲಿಕೆಯ ಆಯವ್ಯಯದಲ್ಲಿ ನಿಗಧಿಪಡಿಸಿರುವಂತೆ ಸುವರ್ಣ ಆರೋಗ್ಯ ಟ್ರಸ್ಟಗೆ ಬಿಡುಗಡೆ ಮಾಡಲು ಅಗತ್ಯ ಕ್ರಮಕೈಗೊಳ್ಳುವುದು.

ಈ ಯೋಜನೆಯ ಅನುಷ್ಠಾನದ ಎಲ್ಲಾ ಮೇಲ್ವಿಚಾರಣೆ ಕೈಗೊಳ್ಳವುದು.

ಈ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಪರಿಶೀಲಿಸುವುದು ಹಾಗೂ ಕಾರ್ಯಕ್ರಮದ ಅನುಷ್ಠಾನವನ್ನು ಒಂಟಿಣಂಡಿಟಿಂ ಮಾಡುವುದು.

ಈ ಯೋಜನೆಯ ಅನುಷ್ಠಾನ ಮಾಡುವ ಎಲ್ಲಾ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಈ ಯೋಜನೆಯ ಉತ್ತಮ ಅನುಷ್ಠಾನಕ್ಕಾಗಿ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡುವುದು ಅಲ್ಲದೆ ಯಾವುದೇ ಮಾರ್ಪಾಡುಗಳು ಮಾಡಬೇಕಾಗಿ ಸರ್ಕಾರ ಆದೇಶದಲ್ಲಿ ಬಂದಲ್ಲಿ ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಸರ್ಕಾರ ನಗರಾಭಿವೃದ್ದಿ ಇಲಾಖೆಯ ಆದೇಶದ ದಿನಾಂಕ: 12-01-2010 ರಲ್ಲಿ ತಿಳಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅರ್ಹ ಕುಟುಂಬಗಳಿಗೆ ಪ್ರತೀ ವರ್ಷ

ಅಂದಾಜು ಸಂಖ್ಯೆ ಹಾಗೂ ಬೇಕಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ. ಸದರಿ ಮೊತ್ತವನ್ನು ಸುವರ್ಣ ಆರೋಗ್ಯ ಟ್ರಸ್ಟಿಗೆ ಬಿಡುಗಡೆ ಮಾಡಬೇಕಾಗುತ್ತದೆ. 2010–11ನೇ ಸಾಲಿನ ಆಯವ್ಯಯ ಲೆಕ್ಕ ಶಿರ್ಷಿಕೆಯಡಿಯಲ್ಲಿ ವೆಚ್ಚ ಭರಿಸಬೇಕಾಗುತ್ತದೆ.

| | | |
|---|---|---|
| 1. | ಕೊಳಚೆ ಪ್ರದೇಶದ ನಿವಾಸಿಗಳು | 136486 |
| 2. | ಸಫಾಯಿ ಕರ್ಮಚಾರಿಗಳು | 16069 |
| 3. | ಆಟೋ ಚಾಲಕರು | 99956 |
| 4. | ಪೌರ ಕಾರ್ಮಿಕರು | 7935 |
| 5. | ಗುತ್ತಿಗೆ ಪೌರ ಕಾರ್ಮಿಕರು | 12000 |
| 6. | ಬಿಪಿಎಲ್ ಕಾರ್ಡ್ ದಾರರು | 423600 |
| | **ಒಟ್ಟು ಮೊತ್ತ** | **6,96,046x300= 20,88,13,800–00** |

ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ನೋಡಿಕೊಳ್ಳಲು ಸರ್ಕಾರದ ಆರೋಗ್ಯ ಇಲಾಖೆಯ ಆದೇಶದಲ್ಲಿ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ ಸದರಿ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುವುದು ಅದೇ ರೀತಿ ಪಾಲಿಕೆಯಲ್ಲಿ ವಲಯ ಮಟ್ಟದಲ್ಲಿ ಅಪರ / ಜಂಟಿ ಆಯುಕ್ತರು ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬಹುದಾಗಿದೆ. ಪಾಲಿಕೆಯಲ್ಲಿ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಸಮಿತಿಯನ್ನು ಈಕೆಳಕಂಡಂತೆ ರಚಿಸಬಹುದಾಗಿದೆ.

| | |
|---|---|
| ಅಪರ/ಜಂಟಿ ಆಯುಕ್ತರು | ಅಧ್ಯಕ್ಷರು |
| ಉಪ ಆಯುಕ್ತರು | ಸದಸ್ಯರು |
| ಮುಖ್ಯ ಅಭಿಯಂತರರು | ಸದಸ್ಯರು |
| ಕಲ್ಯಾಣಾಧಿಕಾರಿಗಳು | ಸದಸ್ಯರು |
| ಆರೋಗ್ಯಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

ಮೇಲ್ಕಂಡ ಉಸ್ತುವಾರಿ ಸಮಿತಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿದೆ.

ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ವಲಯ ವ್ಯಾಪ್ತಿಗೆ ಬರುವ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

ಆಯ್ಕೆಯಾದ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ದೃಡೀಕರಣದೊಂದಿಗೆ ಸಲ್ಲಿಸತಕ್ಕದ್ದು.

ಈ ಯೋಜನೆಯಡಿಯಲ್ಲಿ ಪಾಲಿಕೆಯ ವ್ಯಾಪ್ತಿಗೆ ಬರುವ ಆಸ್ಪತ್ರೆ ಹಾಗೂ ವಿಮಾ ಸಂಸ್ಥೆಗಳ ಆಯ್ಕೆಯಾದ ಫಲಾನುಭವಿಗಳಿಗೆ ಉತ್ತಮ ಸೇವೆ ನೀಡುತ್ತಿರುವ ಬಗ್ಗೆ ಪರಿಶೀಲಿಸುವುದು.

ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಸಮಸ್ಯಗಳು ಬಂದಲ್ಲಿ ಸರ್ಕಾರದ ಕಾರ್ಯಕಾರಿ ಸಮಿತಿಗೆ ವರದಿ ಸಲ್ಲಿಸುವುದು.

ಆಯ್ಕೆಯಾದ ಫಲಾನುಭವಿಗಳಿಗೆ ಬಯೋ ಮೆಟ್ರಿಕ್ ಗುರತಿನ ಚೀಟಿ ನೀಡಲು ಕ್ರಮ ಕೈಗೊಳ್ಳತಕ್ಕದ್ದು.

**_ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ವಲಯ ಅಪರ ಅಥವಾ ಜಂಟಿ ಆಯುಕ್ತರುಗಳಿಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಬಹುದಾಗಿದೆ. ಆಯ್ಕೆ ಮಾಡಿ ಆಯ್ಕೆ ಮಾಡುವಾಗ ಒಂದು ಕುಟುಂಬಕ್ಕೆ ವಿಮಾ ವಂತಿಕೆ ವರ್ಷಕ್ಕೆ ರೂ.300/– ಗಳನ್ನು ಮಾತ್ರ ಪಾವತಿಸುವುದರಿಂದ ಕುಟುಂಬದ 5 ಸದಸ್ಯರನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಸದರಿ ವಿಮಾ ಮೊತ್ತವನ್ನು ಎರಡು ಕಂಡುಗಳಲ್ಲಿ ರೂ.150/–ರಂತೆ ಸುವರ್ಣ ಆರೋಗ್ಯ ಟ್ರಸ್ಟಿಗೆ ಪಾವತಿ ಮಾಡಬೇಕಾಗತಕ್ಕದ್ದು.**

1. ಖಾಯಂ ಪೌರ ಕಾರ್ಮಿಕರು:– ಪಟ್ಟಿಯ ವಲಯ ಕಛೇರಿಗಳಲ್ಲಿ ಲಭ್ಯವಿದ್ದು. ಈ ಬಗ್ಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಂದ ದೃಡೀಕರಣ ಪಡೆದು ಆಯ್ಕೆ ಮಾಡಬಹುದಾಗಿದೆ ಆಯ್ಕೆ ಮಾಡುವಾಗ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ನೌಕರರು ಇದ್ದಲ್ಲಿ ಸದರಿ ಕುಟುಂಬದಲ್ಲಿ ಒಬ್ಬರನ್ನು ಮಾತ್ರ ಕುಟುಂಬದವರೆಂದು ಪರಿಗಣಿಸತಕ್ಕದ್ದು. ಖಾಯಂ ಪೌರ ಕಾರ್ಮಿಕರಿಗೆ ಈಗಾಗಲೆ ಮ್ಯಾನೇಜ್ಡ್ ಹೇಲ್ತ್ ಕೇರ್ ಕಾರ್ಯಕ್ರಮವಿರುವುದರಿಂದ ಈ ಬಗ್ಗೆ ಪೌರ ಕಾರ್ಮಿಕರಿಂದ ಸಮ್ಮತಿ ಪಡೆದು ಯಾವ ಯೋಜನೆಗೆ ಸದರಿಯವರು ಸಮ್ಮತಿಸಿದರೆ ಸದರಿ ಯೋಜನೆಯಡಿಯಲ್ಲಿ ಮಾತ್ರ ಪರಿಗಣಿಸತಕ್ಕದ್ದು
2. ಗುತ್ತಿಗೆ ಪೌರ ಕಾರ್ಮಿಕರು:– ಸಂಬಂಧಪಟ್ಟಂತೆ ವಲಯ ಕಛೇರಿಗಳಲ್ಲಿ ಘನ ತ್ಯಜ್ಯ ನಿರ್ವಹಣೆ ಬಟವಾಡೆ ಅಧಿಕಾರಿಗಳು ಗುತ್ತಿಗೆ ಪೌರ ಕಾರ್ಮಿಕರು ವಿವರಗಳನ್ನು ಹೊಂದಿದ್ದು ಸದರಿ ಗುತ್ತಿಗೆ ಪೌರ ಕಾರ್ಮಿಕರಿಗೆ ಪಿಎಫ್ / ಈ.ಎಸ್.ಐ ಖಾತೆ ಹೊಂದಿರುವವರ ಮಾತ್ರ ಯೋಜನೆಗೆ ಅರ್ಹರಾಗಿರುತ್ತಾರೆ ಸದರಿಯವರು ಕರ್ತವ್ಯದಿಂದ ಬಿಡುಗಡೆಗೊಂಡನಂತರ ಅವರ ಅರ್ಹತೆಯನ್ನು ರದ್ದುಪಡಿಸತಕ್ಕ ದ್ದು ಈ ಮಾಹಿತಿ ದೃಡೀಕರಿಸಿದ ಕುಟುಂಬದವರನ್ನು ಆಯ್ಕೆ ಮಾಡತಕ್ಕದ್ದು
3. ಸಫಾಯಿ ಕರ್ಮಚಾರಿಗಳು:– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಫಾಯಿ ಕರ್ಮಚಾರಿಗಳ ಸಮೀಕ್ಷೆ ಕೈಗೊಂಡಿದ್ದು ಅನುಮೋದನೆ ಪಟ್ಟಿ ಆಯಾಯಾ ವಲಯ ಕಛೇರಿಗಳಲ್ಲಿ ಲಭ್ಯವಿದ್ದು ಸದರಿ ಕುಟುಂಬದವರಿಗೆ ಮಾತ್ರ ಆಯ್ಕೆ ಮಾಡತಕ್ಕದ್ದು ಸದರಿ ಸಮೀಕ್ಷೆಯ ಕುಟಂಬದ ವರದಿಯ ವಿವರಗಳನ್ನು ಕೇಂದ್ರ ಕಛೇರಿಯ ಕಲ್ಯಾಣ ವಿಭಾಗದಲ್ಲಿ ಸಹಿ ಪರಿಶೀಲಿಸಿ ಖಾತ್ರಿ ಮಾಡಕೊಳ್ಳತಕ್ಕದ್ದು
4. ಬಿಪಿಎಲ್ ಕುಟುಂಬದವರು:– ಸರ್ಕಾರ ಆಹಾರ ಮತ್ತು ನಾಗರೀಕ ಇಲಾಖೆಯ ಈಗಾಗಲೇ ಬಿಪಿಎಲ್ ಕುಟುಂಬದ ಸಮೀಕ್ಷೆ ಕೈಗೊಂಡು ಬಿಪಿಎಲ್ ಕಾರ್ಡ್ ವಿತರಿಸಲಾಗಿರುತ್ತದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಾಗರೀಕರ ಬಿಪಿಎಲ್ ಕಾರ್ಡ್ ಅನ್ನು ಕುಲಂಕುಷವಾಗಿ ಪರಿಶೀಲಿಸಿ ಕಾರ್ಡ್ ನ ಮೇಲೆ ಬಿಪಿಎಲ್ ಎಂದು ನಮೂದಿಸಿದ ಕುಟುಂಬದವರನ್ನು ಮಾತ್ರ ಆಯ್ಕೆ ಮಾಡತಕ್ಕದ್ದು ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ದೃಡೀಕರಣ ಪಡೆಯತಕ್ಕದ್ದು
5. ಆಟೋ ಚಾಲಕರು:– ಆಯಾ ವಲಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಾಸದ ದೃಢೀಕರಣದೊಂದಿಗೆ ಆರ್.ಟಿ.ಓ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಪೋಲೀಸ್ ಕಮಿಷನರ್ ಇವರಿಂದ ಪರವಾನಗಿ ಹೊಂದಿರುವ ಕುಟುಂಬದವರಾಗಿರಬೇಕು ಸದರಿಯವರು ಪರವಾನಗಿಯ ದೃಡೀಕೃತ ಫೋಟೊ ಪರವಾನಗಿಯನ್ನು ಸಲ್ಲಿಸಿದ ಆಟೋ ಚಾಲಕರನ್ನು ಆಯ್ಕೆ ಮಾಡಬಹುದಾಗಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ ಪಡೆಯತಕ್ಕದ್ದು.
6. ಕೊಳಚೆ ಪ್ರದೇಶದ ನಿವಾಸಿಗಳು:– ಬಿಪಿಎಲ್ ಕಾರ್ಡ್ ಹೊಂದಿದವರಾಗಿದ್ದರೆ ಈಗಾಗಲೇ ಕ್ರಮ ಸಂಖ್ಯೆ ತಿಳಿಸಿರುವಂತೆ ಆಯ್ಕೆ ಮಾಡಬಹುದಾಗಿದೆ. ಅಲ್ಲದೆ ಪಾಲಿಕೆಯಿಂದ ಕೊಳಚೆ ಪ್ರದೇಶಗಳ

ಸಮೀಕ್ಷೆ ಕಾರ್ಯ ಕೈಗೊಂಡಿದ್ದು ಸಮೀಕ್ಷೆಯಲ್ಲಿ ಪರಿಗಣಿಸುವ ಕುಟುಂಬದವರನ್ನು ಆಯ್ಕೆ ಮಾಡತಕ್ಕದ್ದು ಕೊಳಚೆ ಪ್ರದೇಶ ನಿವಾಸಿಗಳಿಗೆ ಆದಾಯದ ಮಿತಿಯನ್ನು ಪಾಲಿಕೆಯು ಆಗಿಂದಾಗ್ಗೆ ನಿಗದಿಗೊಳಿಸಬಹುದಾಗಿದೆ.

7. ಮೇಲೆ ತಿಳಿಸಿದ ಫಲಾನುಭವಿಗಳು ಈಗಾಗಲೇ ಸರ್ಕಾರದ / ಸರ್ಕಾರೇತರ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆಯುತ್ತಿದ್ದಲ್ಲಿ, ಅಂತಹವರನ್ನು ಈ ಯೋಜನೆಯಡಿ ಪರಿಗಣಿಸತಕ್ಕದ್ದಲ್ಲ
8. ಆಯ್ಕೆಯಾದ ಕುಟುಂಬದ ಸದಸ್ಯರುಗಳುಗೆ ಬಯೋ ಮೆಟ್ರಿಕ್ ಹೇಲ್ತ್ ಕಾರ್ಡ್ ಗುರುತಿನ ಚೀಟಿಯನ್ನು ನೀಡಲು ಅಗತ್ಯ ಕ್ರಮಕೈಗೊಳ್ಳತಕ್ಕದ್ದು.
9. ಕಾರ್ಯಕ್ರಮದ ಅನುಷ್ಠಾನದಲ್ಲಿ ಸರ್ಕಾರದ ಮಾರ್ಗಸೂಚಿಗಳು ಹಾಗೂ ಪಾಲಿಕೆಯ ಮಾರ್ಗಸೂಚಿಗಳನ್ನು ಉಲ್ಲಂಘೀಸಿ ಅನುಷ್ಠಾನ ಮಾಡುವ ವಲಯ ಅಪರ / ಜಂಟಿ ಆಯುಕ್ತರುಗಳೆ ನೇರ ಜವಾಬ್ದಾರರು.
10. ಈ ಕಾರ್ಯಕ್ರಮವನ್ನು ಪಾಲಿಕೆಯ ಆದಾಯದ ಅನುಗುಣವಾಗಿ ಅನುಷ್ಠಾನ ಮಾಡಬಹುದಾಗಿದೆ ಹಾಗೂ ಸರ್ಕಾರದ ಆದೇಶದಲ್ಲಿ ಈ ಕಾರ್ಯಕ್ರಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ವಿಸ್ತರಿಸಿದ್ದಲ್ಲಿ ಅದರೊಂದಿಗೆ ಪಾಲಿಕೆಗೆ ಕಾರ್ಯಕ್ರಮವು ಸಹ ವಿಲೀನವಾಗುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಿಪಿಎಲ್ ಕುಟುಂಬದವರಿಗೆ ಹಾಗೂ ಇತರರಿಗೆ ಸುವರ್ಣ ಆರೋಗ್ಯ ಸುರಕ್ಷಾ ವಿಮಾ ಯೋಜನೆಯ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಮುಖಾಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಾರ್ಯಕ್ರಮ ಅನುಷ್ಠಾನ ಕೈಗೊಳ್ಳಲು ಅನುಮತಿ ನೀಡುಲಾಗಿರುತ್ತದೆ ಎನ್ನುವ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರ ಟಿಪ್ಪಣಿ ದಿನಂಕ:25–02–2010 ರಂದು ಒಪ್ಪಿರುತ್ತಾರೆ.

ಅದರಂತೆ ಆಯ್ಕೆಯಾದ ಕುಟುಂಬದ ಸದಸ್ಯರಿಗೆ ವಿವಿಧೋದ್ದೇಶ Biometric health card ಗುರುತಿನ ಚೀಟಿ ನೀಡುವುದು ಕಾರ್ಯಕ್ರಮವಿದ್ದು, ತತ್ಸಂಭಂಧಕ್ಕೆ ಆಯುಕ್ತರ ಆಪ್ತಕಾರ್ಯಲಯ ಸಂಖ್ಯೆ ಪಿ.ಎಸ್,ಆರ್(ಉ)1299/2010–11 ದಿನಾಂಕ:–10/06/2010 ಆಡಳಿತಾತ್ಮಕ ಅನುಮೋದನೆ, ಮುಖ್ಯ ಲೆಕ್ಕಾಧಿಕಾರಿಗಳ ಸಂಖ್ಯೆ 3435 ದಿನಾಂಕ:–17/06/2010 ಕಾಮಗಾರಿ ಸಂಕೇತ ಪಡೆದು E–Procurment, ಟೆಂಡರ್ ಕರೆಯಲಾಗಿರುತ್ತದೆ. ಪ್ರಾಥಮಿಕ ಹಂತದಲ್ಲಿ 2 ಲಕ್ಷದ ಸ್ಮಾರ್ಟ್‌ಕಾರ್ಡ್‌ನ್ನು ವಿತರಿಸುವ ಗುರಿಹೊಂದಿದ್ದು ಸದರಿ ಕೆಲಸವನ್ನು ನಿರ್ವಹಿಸಲು 4 ಸಂಸ್ಥೆಯವರು ಭಾಗವಹಿಸಿದ್ದು, ಇದರಲ್ಲಿ ಮೇ॥Radiant infosystems ರವರು ಅತಿ ಕಡಿಮೆ ದರ ನಮೂದಿಸಿರುತ್ತಾರೆ. ಆದರೆ ಸದರಿಯವರು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಗುತ್ತಿಗೆ ಪ್ರಸ್ತಾವನೆಯಂತೆ ದರಪಟ್ಟಿ ನೀಡದಿರುವುದರ ಮೇರೆಗೆ ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಪ್ರಸ್ತಾವನೆಯಲ್ಲಿ ಕೇಳಿರುವ ಎಲ್ಲಾ ಅಂಶಗಳು ಬಹು ಮುಖ್ಯ ಎಂದು ಟೆಂಡರ್ ತಾಂತ್ರಿಕ ಸಮಿತಿ ಮತ್ತು ಪರಿಣಿತಿ ತಾಂತ್ರಿಕ ಸಮಿತಿ ಅಭಿಪ್ರಾಯಪಟ್ಟಿರುವುದರ ಮೇರೆಗೆ ಸದರಿ ಸಂಸ್ಥೆಯವರ ಆರ್ಥಿಕ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿ ಅದರಂತೆ 2ನೇ ಅತಿ ಕಡಿಮೆ ದರ ನಮೂದಿಸಿರುವ ಸಂಸ್ಥೆಯಾದ HCL ರವರು ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವ ಅಂಶಗಳನ್ನು ಬೇಕಾದಲ್ಲಿ ನೀಡುವುದಾಗಿ ಹಾಗೂ ಅದರ ದರಗಳನ್ನು ಬೇರೆಯಾಗಿ ನಮೂದಿಸಿರುವುದರ ಮೇರೆಗೆ Conditional tender ನೀಡಿರುವುದರಿಂದ ಅವರ ದರ

ಪಟ್ಟಿಯನ್ನು ತಿರಸ್ಕರಿಸಲಾಗಿ, 3ನೇ ಅತಿಕಡಿಮೆ ದರ ಪಟ್ಟಿ ನೀಡಿರುವ ಸಂಸ್ಥೆಯಾದ ಮೇ॥ Effia Technologies ರವರ ಪ್ರಸ್ತಾವನೆಯನ್ನು ತಾಂತ್ರಿಕ ಸಮಿತಿ ಮತ್ತು ಪರಿಣಿತ ತಾಂತ್ರಿಕ ಸಮಿತಿಯು ಅಂಗೀಕರಿಸಿದ್ದು, ಸದರಿ ಸಂಸ್ಥೆಯವರು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಪರಿಗಣಿಸಿದ ಮೇರೆಗೆ ಅವರ ಆರ್ಥಿಕ ಪ್ರಸ್ತಾವನೆಯನ್ನು ಒಪ್ಪಬಹುದು ಎಂದು ತೀರ್ಮಾನಕ್ಕೆ ಬರಲಾಯಿತು ಹಾಗೂ ಅವರು ಸಲ್ಲಿಸಿರುವ ದರಪಟ್ಟಿ ಈ ಕೆಳಕಂಡಂತಿರುತ್ತದೆ.

**ವಿವರಗಳು**

| Sl. No | Item Description | Make | Unit | Qty. | Price per unit (Rs.) | | Total Cost (Rs.) | | Total price in Rs. ( Supply + Annual O & M) |
|---|---|---|---|---|---|---|---|---|---|
| | | | | | Supply | O & M per month | Supply | Annual O & M | |
| (a) | (b) | | (c) | (d) | (e) | (f) | (g=e*d) | (h=d*f*12) | (i=h+g) |
| 1 | Data collection, survey of each Hospital/Health centers and report /work methodology submission . | | LS | 1 | 275,750 | N.A. | 275,750 | N.A. | 275,750 |
| | | | | | | | | | |
| 2 | Health Centre | | Sets | 50 | 755,106 | 7,722 | 37,755,300 | 4,633,241 | 42,388,541 |
| | Computer | | Nos. | 50 | 39,000 | 406 | 1,950,000 | 243,750 | 2,193,750 |
| | UPS | | Nos. | 50 | 16,250 | 169 | 812,500 | 101,563 | 914,063 |
| | Back-up Device | | Nos. | 50 | 8,450 | 88 | 422,500 | 52,813 | 475,313 |
| | Biometric Scanner | | Nos. | 50 | 4,163 | 43 | 208,163 | 26,020 | 234,183 |
| | VGA Camera | | Nos. | 50 | 1,638 | 17 | 81,900 | 10,238 | 92,138 |
| | Smart Card Reader | | Nos. | 50 | 887 | 9 | 44,363 | 5,545 | 49,908 |
| | Smart Card Printer | | Nos. | 50 | 87,360 | 910 | 4,368,000 | 546,000 | 4,914,000 |
| | Handheld Smart Card Reader with fingerprint verification | | Nos. | 50 | 79,170 | 825 | 3,958,500 | 494,813 | 4,453,313 |
| | Installation charges | | Nos. | 50 | 13,788 | - | 689,375 | - | 689,375 |
| | Softwares and licences | | Nos. | 50 | 504,400 | 5,254 | 25,220,000 | 3,152,500 | 28,372,500 |
| | Data Centre | | Sets | 1 | 8,644,350 | 214,915 | 8,644,350 | 2,578,975 | 11,223,325 |
| | Servers (web, application, database, mirrors, back-up, SAN Controller, Switch, cluster, Load Balancer, Automated Tape Library) | 1.04 | Set | 1 | 6,175,000 | 64,323 | 6,175,000 | 771,875 | 6,946,875 |
| | Data Centre set-up costs (Laserjet Printers, UPS-8hrs, Furniture, Network Infrastructure, Desktops for staff) | | Set | 1 | 390,000 | 4,063 | 390,000 | 48,750 | 438,750 |
| | Server OS, Back up Software License Fees, Other softwares and applications | | Set | 1 | 1,391,000 | 89,167 | 1,391,000 | 1,070,000 | 2,461,000 |
| | Help Desk Services | | Set | 1 | 688,350 | 57,363 | 688,350 | 688,350 | 1,376,700 |
| | Network | | Sets | 1 | 1,657,500 | 344,688 | 1,657,500 | 4,136,250 | 5,793,750 |
| | Network charges as per SLAs | 256kps at health cetread 6-8mbps at data cetre | Sets | 1 | 1,657,500 | 344,688 | 1,657,500 | 4,136,250 | 5,793,750 |
| | Services | | | | 11,552,306 | 401,042 | 11,552,306 | 4,812,500 | 16,364,806 |

| | | | | | | | | | |
|---|---|---|---|---|---|---|---|---|---|
| | Datacentre Management and application development and reporting services | Specify Duration | Man-Months | | - | 401,042 | - | 4,812,500 | 4,812,500 |
| | Project Management charges | Specify Duration | Man-Months | | 6,092,456 | - | 6,092,456 | - | 6,092,456 |
| | Data entry services | Specify Duration | Man-Months | | 5,459,850 | - | 5,459,850 | - | 5,459,850 |
| | Training and promotion charges | | LS | 1 | 1,380,129 | - | 1,380,129 | - | 1,380,129 |
| | Training and promotion charges | | LS | 1 | 1,380,129 | - | 1,380,129 | - | 1,380,129 |
| 3 | Smart Cards | | Nos. | 1lakh | 37 | 0.38 | 3,658,200 | 457,275 | 4,115,475 |
| 4 | Information Kiosk | | Nos. | 50 | 195,000 | 2,031 | 9,750,000 | 1,218,750 | 10,968,750 |
| | | | | | | | | | |
| TOTAL COST FOR IMPLEMENTATION OF SMART CARD HEALTH INSURANCE PROGRAM INCLUDING ALL THE TAXES AND DUTIES BUT EXCLUDING SERVICE TAX FOR PRICE SHEET | | | | | | | | | 92,510,526 |

ಈ ದರಪಟ್ಟಿಯಲ್ಲಿ ಯೋಜನೆಗೆ ಸಂಭಂದಿಸಿದ ಎಲ್ಲಾ ಐಟಂಗಳನ್ನು ಗಣನೆಗೆ ತೆಗೆದುಕೊಂಡಿದ್ದು ಪಾಲಿಕೆಯ ತೆಗೆದುಕೊಳ್ಳುವ ಐಟಂಗಳಿಗೆ ಮಾತ್ರ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಪಾವತಿಸ ಬಹುದು. ಈ ಯೋಜನೆಯ ಅನುಷ್ಠಾನದ Biometric ಗುರುತಿನ ಚೀಟಿ ವಿತರಿಸುವುದರಿಂದ ಬಡವರಿಗೆ ಮತ್ತು ಅತಿ ಬಡವರಿಗೆ ಸರ್ಕಾರದ ಕಾರ್ಯಕ್ರಮಗಳನ್ನು ಈ ಗುರುತಿನ ಚೀಟಿಯಲ್ಲಿ ಅಳವಡಿಸಿಕೊಂಡು ಎಲ್ಲಾ ಬಡವರು ಮತ್ತು ಅತ್ಯಂತ ಕಡು ಬಡವರನ್ನು ಗುರುತಿಸಿ, ಎಲ್ಲಾ ಆರೋಗ್ಯ ಕಲ್ಯಾಣ ಕಾರ್ಯಕ್ರಮಗಳು *ಮತ್ತು ಸಮಾಜ ಕಲ್ಯಾಣ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳನ್ನು ಎಲ್ಲಾ ಫಲಾನುಭವಿಗಳಿಗೆ ಸಮಾನಾಂತರವಾಗಿ ನೀಡುವ ಉದ್ದೇಶದಿಂದ ಈ ಯೋಜನೆಯನ್ನು ಸಿದ್ದಪಡಿಸಲಾಗಿರುತ್ತದೆ. ಸದರಿ ಯೋಜನೆಯಿಂದ ಈಗಾಗಲೇ ತಿಳಿಸಿರುವಂತೆ, ಫಲಾನುಭವಿಗಳಿಗೆ ಈಗಾಗಲೇಗ ಒಡಂಬಡಿಕೆ ಮಾಡಿಕೊಂಡಿರುವ ಸರ್ಕಾರಿ/ಖಾಸಗಿ ಆಸ್ಪತ್ರೆಗಳಿಗೆ ನೇರವಾಗಿ ಹೋಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿರುತ್ತದೆ, ಈ ಗುರುತಿನ ಚೀಟಿ ನೀಡುವುದರಿಂದ, ಬಡವರಲ್ಲಿ ಮತ್ತು ಅತ್ಯಂತ ಕಡುಬಡವರಲ್ಲಿ ಕಂಡುಬರುವ ಆರ್ಥಿಕ, ಸಾಮಾಜಿಕ ಉದ್ಯೋಗಿಗಳ ಪರಿಸ್ಥಿತಿಯನ್ನು ಕಲೆ ಹಾಕಿ ಪಾಲಿಕೆಯಲ್ಲಿ ಕಾಲ್ಯಾಣ ಕಾರ್ಯಾಕ್ರಮಗಳ ಬಗ್ಗೆ ನಿರ್ಧಾರ ತೆಗೆದು ಕೊಳ್ಳಬಹುದಾಗಿದೆ. ಈಗಾಗಲೇ ಕೇಂದ್ರ, ರಾಜ್ಯ ಸರ್ಕಾರದ ಮತ್ತು ಪಾಲಿಕೆ ಹಲವು ಆರೋಗ್ಯ ಕಾರ್ಯಕ್ರಮಗಳನ್ನು ಗುರುತಿನ ಚೀಟಿಯಲ್ಲಿ ಅಳವಡಿಸಿಕೊಂಡು ಯೋಜನೆಯನ್ನು ರೂಪಿಸಲು ಸಹಾಯವಾಗುತ್ತದೆ.*

ಈ ಹಿನ್ನಲೆಯಲ್ಲಿ ಸದರಿ ಯೋಜನೆಗೆ Biometric Smart Card ನ್ನು ವಿತರಿಸಲು ಮೇ॥ Effia Technologies ರವರು ಆಯ್ಕೆಯಾಗಿದ್ದು ಈ ಯೋಜನೆಗೆ ಪ್ರಥಮ ಹಂತದಲ್ಲಿ 1ಲಕ್ಷ ಕಾರ್ಡ್ ವಿತರಿಸಲು Data collection & surveyಗೆ ರೂ.2,75,750=00, ಆರೋಗ್ಯ ಕೇಂದ್ರಕ್ಕೆ ಅಳವಡಿಸುವ ಗಣಕಯಂತ್ರ ಮತ್ತು ಇನ್ನಿತರೆ ಸಾಮಾಗ್ರಿಗಳಿಗೆ ರೂ.4,23,88,541=00 ಗಳಾಗಲಿದ್ದು, Data Centre set-upಗೆ ರೂ.1,12,23,325=00, Network chargesಗೆ ರೂ.57,93,750=00, Data centre management & application development Services Rs. 1,63,64,806=00, Smart Cards ನೀಡಲು ರೂ.41,15,475=00, Information Kioskಗೆ ರೂ.1,09,68,750=00 ಹಾಗೂ ಪ್ರತಿ ವರ್ಷಕ್ಕೆ ಶೇ.7.5%ರಷ್ಟು compound basis ನಂತೆ ಒಟ್ಟು 5 ವರ್ಷಕ್ಕೆ ಕಡಿಮೆ ದರ ನಮೂದಿಸಿರುತ್ತಾರೆ. ಅದರಂತೆ ದ್ವಿತೀಯ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.1,91,74,766=00, ತೃತೀಯ ವರ್ಷ ವಾರ್ಷಿಕ

ನಿರ್ವಹಣೆ ವೆಚ್ಚ ರೂ.2,06,12,872=00, ನಾಲ್ಕನೇ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,21,58,839=00 ಮತ್ತು ಐದನೇ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,38,20,751=00 ಖರ್ಚಾಗುತ್ತದೆ. ಅಲ್ಲದೇ ಇತರೇ ಖರ್ಚುಗಳ ವಿವರವನ್ನು ಸವಿಸ್ತಾರವಾಗಿ ನಮೂದಿಸಲಾಗಿರುತ್ತದೆ ಹಾಗೂ ಪ್ರಥಮ ಹಂತದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟಗೆ ಕುಟುಂಬಕ್ಕೆ ಸರಾಸರಿ ರೂ.300/- ರೂಗಳಂತೆ 2ಲಕ್ಷ ಕುಟುಂಬಗಳಿಗೆ ಒಟ್ಟು ರೂ.6,00,00,000=00 (ಆರುಕೋಟಿ) ರೂಗಳನ್ನು ಪಾವತಿಸಬೇಕಾಗಿರುತ್ತದೆ, ಮುಂದುವರಿದಂತೆ

ರೂ.300/- ಪ್ರತಿ ಕುಟುಂಬಕ್ಕೆ 5 ಜನರಿಗೆ ಹೆಚ್ಚಿನ ಸ್ಮಾರ್ಟ್ ಕಾರ್ಡ್‌ನ್ನು ವಿತರಿಸಿದ್ದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಖರ್ಚನ್ನು ನಿಗಧಿಪಡಿಸಿರುವ 2010-11ರ ಆಯವ್ಯಯದಲ್ಲಿ ಭರಿಸಬಹುದಾಗಿದೆ ಎಂಬ ಬಗ್ಗೆ ಅನುಮೊದನೆ ಕೋರುವ ಈ ಪ್ರಸ್ತಾವನೆಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ:*** ದಿನಾಂಕ:02/02/2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

(ಪಿ. ಸುಗುಮಾರ್)
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.

**<u>ಪ್ರತಿಯನ್ನು:-</u>**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಯುಕ್ತರವರ ಆಪ್ತಕಾರ್ಯದಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ/ವಿರೋಧ ಪಕ್ಷ ಮತ್ತು ಜೆ.ಡಿ.ಎಸ್ ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
- ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಕಳುಹಿಸಿದೆ.
- ಅಪರ ಆಯುಕ್ತರು (ಆರೋಗ್ಯ)/(ಕಲ್ಯಾಣ)/ಮತ್ತು(ಆಸ್ತಿಗಳು) ರವರ ಅವಗಾಹನೆಗೆ ಕಳುಹಿಸಿದೆ.
- ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರವರಿಗೆ ಕಳುಹಿಸಿದೆ.
- ಉಪ ಆಯುಕ್ತರು (ಕಲ್ಯಾಣ) ಹಾಗೂ ಕಲ್ಯಾಣ ಅಧಿಕಾರಿ(ಕೇಂದ್ರ ಕಛೇರಿ) ರವರಿಗೆ ಕಳುಹಿಸಿದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ
- ಕೌನ್ಸಿಲ್ ಕಾರ್ಯದರ್ಶಿ/ಅಧಿಕ ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸಿದೆ.
- ಕಛೇರಿ ಕಡತಕ್ಕೆ.